# ಹಂಪಿ ಟೈಮ್ಸ್
HAMPI TIMES
ಕನ್ನಡ ದಿನಪತ್ರಿಕೆ
KANNADA DAILY

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA

ಸಂಪುಟ:01 • ಸಂಚಿಕೆ:215 • ನೋಂದಣಿ ನಂ.:KARKAN27911 • ವಿಜಯನಗರ • 20.01.2024 • ಶನಿವಾರ • ಪುಟ:04 • ಬೆಲೆ:2
Volume:01 • Issue:215 • Reg.No:KARKAN27911 • VIJAYANAGARA • 20.01.2024 • Saturday • Page:04 • Rs:2



ಹಂಪಿ ಟೈಮ್ಸ್ HAMPI TIMES Kannada Daily
BOOK SPACE
as your requirement
Special Offer Just For You!
Special Discount
And Free Creative
Support
SPECIAL OFFER
www.hampitimes.com
epaper.hampitimes.com
CALL US : 9448633038
Email us Your Advertisement Content to : hampitimes@gmail.com



ವಿಜಯನಗರ ಮತ್ತು ಬಳ್ಳಾರಿ ಜಿಲ್ಲೆಯ ಸಮಸ್ತ ರೈತರಿಗೆ ದಸರ ಹಾಗೂ ದೀಪಾವಳಿ ಹಬ್ಬಕ್ಕೆ ಸಹಕಾರ ನಿಡಿದ್ದಕ್ಕಾಗಿ ತುಂಬು ಹೃದಯದ ಧನ್ಯವಾದಗಳು

MASSEY FERGUSON
ವಿಜಯಶ್ರೀ ಮೋಟಾರ್ಸ್ ಟ್ರ್ಯಾಕ್ಟರ್ ವಿಭಾಗ
TAFE

28 HP ಟ್ರ್ಯಾಕ್ಟರ್ ಡೌನ್ ಪೇಮೆಂಟ್ ಕೇವಲ ₹280/- MF 6028
42 HP ಟ್ರ್ಯಾಕ್ಟರ್ ಡೌನ್ ಪೇಮೆಂಟ್ ಕೇವಲ ₹499/- MF 241
45 HP ಟ್ರ್ಯಾಕ್ಟರ್ ಡೌನ್ ಪೇಮೆಂಟ್ ಕೇವಲ ₹501/- MF 245

*ಟಿ.ಪಿ., ಇನ್ಸುರೆನ್ಸ್, ರಿಜಿಸ್ಟ್ರೇಶನ್ ಉಚಿತ
ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿರಿ :
ವಿಜಯಶ್ರೀ ಮೋಟಾರ್ಸ್ ಟ್ರ್ಯಾಕ್ಟರ್ ವಿಭಾಗ
ಕೊಂಡನಾಯಕನಹಳ್ಳಿ, ಹಂಪಿ ರಸ್ತೆ, ಹೊಸಪೇಟೆ-583239.
ಮೊ : 9980127607, 7353306719
*ಷರತ್ತುಗಳು ಅನ್ವಯಿಸುತ್ತವೆ

ರೈತರ ಕೋರಿಕೆಯ ಮೇರೆಗೆ ಈ ಸ್ಕೀಂ ಇನ್ನೂ 25 ಗ್ರಾಹಕರಿಗೆ ಮಾತ್ರ ವಿಸ್ತರಿಸಲಾಗುವುದು (ಮೊದಲು ಬಂದವರಿಗೆ ಆದ್ಯತೆ)


## ಮೈಕ್ರೋ ನ್ಯೂಸ್

### ಜ.20.ರಂದು ಗ್ರಾಹಕರ ಸಂವಾದ ಸಭೆ

**ಹಂಪಿ ಟೈಮ್ಸ್ ಹೊಸಪೇಟೆ**

ವಿದ್ಯುತ್ ಗ್ರಾಹಕರ ಸಂವಾದ ಸಭೆಯನ್ನು ಜನವರಿ 20ರಂದು ಬೆಳಿಗ್ಗೆ 11 ಗಂಟೆಗೆ ಹೊಸಪೇಟೆ ಗ್ರಾಮೀಣ ಉಪ ವಿಭಾಗದಲ್ಲಿ ಏರ್ಪಡಿಸಲಾಗಿದೆ. ಹೊಸಪೇಟೆ ತಾಲ್ಲೂಕಿನ ವಿದ್ಯುತ್ ಗ್ರಾಹಕರು (ಹೊಸಪೇಟೆ ನಗರ ಹೊರತುಪಡಿಸಿ) ಈ ಸಭೆಗೆ ಭಾಗವಹಿಸಿ, ವಿದ್ಯುತ್ ಸಮಸ್ಯೆ ಇದ್ದಲ್ಲಿ ತಮ್ಮ ಅಹವಾಲುಗಳನ್ನು ಸಲ್ಲಿಸಿ ಪರಿಹರಿಸಿಕೊಳ್ಳಬಹುದು ಎಂದು ಹೊಸಪೇಟೆಯ ಸಹಾಯಕ ಕಾರ್ಯನಿರ್ವಾಕ ಅಭಿಯಂತರ ಬಿ.ದಯಾನಂದ್ ತಿಳಿಸಿದ್ದಾರೆ.


ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ
ಸ್ಥಳೀಯ ಸುದ್ದಿಗಳಿಗಾಗಿ ಭೇಟಿ ನೀಡಿ
www.hampitimes.com
epaper.hampitimes.com


ಮೈಮೇಲೆ ಹರಿದ ಬಟ್ಟೆ ಇದ್ದರೂ ಚಿಂತೆಯಿಲ್ಲ. ಕೈಯಲ್ಲೊಂದು ಕನ್ನಡ ಪತ್ರಿಕೆ ಇರಲಿ.

ಡಿ..ವಿ.ಜಿ.

## ಒಳ ಪುಟಗಳಲ್ಲಿ


ಮಕ್ಕಳಲ್ಲೂ ಪರಿಸರ ಪ್ರಜ್ಞೆ ಬೆಳೆಸಬೇಕು – ಡಾ.ಪರಮೇಶ್ವರಯ್ಯ ಸೊಪ್ಪಿಮಠ
ಪುಟ 2 ರಲ್ಲಿ ಓದಿ

ಶರಣರು ಮನುಕುಲಕ್ಕೆ ಸೇರಿದವರು: ಸಿಎಂ ಸಿದ್ದರಾಮಯ್ಯ
ಪುಟ 2 ರಲ್ಲಿ ಓದಿ

ಗವಿಸಿದ್ದೇಶ್ವರ ಜಾತ್ರಾ ಮಹೋತ್ಸವ
ಪುಟ 3 ರಲ್ಲಿ ಓದಿ


# ಬಸವ ತತ್ವ ಮನೆ-ಮನೆಗೆ ತಲುಪಲಿ

## ಹೊಸಪೇಟೆಯಲ್ಲಿ ಅಶ್ವರೂಢ ಬಸವೇಶ್ವರಗೆ ಮಾಲಾರ್ಪಣೆ | ಸಾಂಸ್ಕೃತಿಕ ನಾಯಕ ಬಸವಣ್ಣ ಘೋಷಣೆ | ಬಸವ ಭಕ್ತರಿಗೆ ಸಂತಸ

**ಹಂಪಿ ಟೈಮ್ಸ್ ಹೊಸಪೇಟೆ**

ಸರ್ಕಾರ ವಿಶ್ವಗುರು ಬಸವಣ್ಣನನ್ನು ರಾಜ್ಯದ ಸಾಂಸ್ಕೃತಿಕ ನಾಯಕ ಎಂದು ಘೋಷಿಸಿದ ಬೆನ್ನಲ್ಲೆ ಸಮಾಜದ ಮುಖಂಡರು ನಗರದ ಬಸವೇಶ್ವರ ವೃತ್ತದಲ್ಲಿ ಶ್ರೀ ಜಗಜ್ಯೋತಿ ಅಶ್ವರೂಢ ಬಸವೇಶ್ವರ ಮುತ್ಥಳಿಗೆ ಮಾಲಾರ್ಪಣೆ ಮಾಡಿ, ಪಟಾಕಿ ಸಿಡಿಸಿ, ಸಿಹಿ ಹಂಚಿ ಸಂಭ್ರಮಿಸಿ, ಸಿಎಂ ಸಿದ್ದರಾಮಯ್ಯ ಹಾಗೂ ಸಚಿವರಿಗೆ ಅಭಿನಂದನೆಗಳು ತಿಳಿಸಿದರು.

ಕನ್ನಡ ವಿವಿಯ ಡಾ.ಕೆ.ರವೀಂದ್ರನಾಥ ಮಾತನಾಡಿ, ಸಾಮಾಜಿಕ ನ್ಯಾಯದ ಮೊದಲ ಹರಿಕಾರ, ವಿಶ್ವಗುರು ಬಸವಣ್ಣ ರಾಜ್ಯದ ಸಾಂಸ್ಕೃತಿಕ ನಾಯಕ ಎಂದು ಕರ್ನಾಟಕ ರಾಜ್ಯ ಸರ್ಕಾರದ ಸಚಿವ ಸಂಪುಟ ಸಭೆಯ ತೀರ್ಮಾನವನ್ನು ಸಿಎಂ ಸಿದ್ದರಾಮಯ್ಯನವರು ಘೋಷಿಸಿರುವುದು ಬಸವ ಭಕ್ತರಿಗೆ, ಅನುಯಾಯಿಗಳಿಗೆ ಸಂತಸ ತಂದಿದೆ. ಸಮಸಮಾಜ ನಿರ್ಮಾಣ, ಮಹಿಳೆಯರಿಗೂ ಸಮಾನತೆ, ಜಾತಿ ವ್ಯವಸ್ಥೆ ವಿರುದ್ಧ ವಚನ ಸಾಹಿತ್ಯದ ಮೂಲಕ ಅರಿವು ಮೂಡಿಸಿದ ಮಹಾಶರಣ ಬಸವಣ್ಣ. ಅವರ ವಚನಗಳು ಇಂದು,



ಎಂದೆಂದಿಗೂ ಸರ್ವರಿಗೂ ಅರಿವು ಹೆಚ್ಚಿಸುವ ಜ್ಞಾನ ಭಂಡಾರವಾಗಿವೆ. ಬಸವಣ್ಣನವರ ವಚನಗಳನ್ನು ಓದಿ ಅರ್ಥೈಸಿಕೊಂಡರೆ, ಸಮಾಜದಲ್ಲಿನ ಅಂಧತ್ವ, ಮೌಢ್ಯಾಚರಣೆ, ತಾರತಮ್ಯ ಹೋಗಲಾಡಿಸಲು ಸಾಧ್ಯ. ಬಸವಣ್ಣನವರ ವಚನ ಸಂದೇಶಗಳನ್ನು ಪ್ರತಿಯೊಬ್ಬರಿಗೂ ತಲುಪಿಸುವ ಮೂಲಕ ಸಮ ಸಮಾಜಕ್ಕೆ ಪ್ರತಿಯೊಬ್ಬರೂ ಶ್ರಮಿಸಬೇಕು ಎಂದರು.

ಸಮಾಜದ ಹಿರಿಯ ಮುಖಂಡ ಸಾಲಿಸಿದ್ದಯ್ಯಸ್ವಾಮಿ ಮಾತನಾಡಿ, 900 ವರ್ಷಗಳ ನಂತರವೂ ಬಸವಣ್ಣನವರ ಚಿಂತನೆಗಳು ಜೀವಂತವಾಗಿವೆ ಎನ್ನುವುದಕ್ಕೆ ಸರ್ಕಾರ ಬಸವಣ್ಣನವರನ್ನು ಕರ್ನಾಟಕದ ಸಾಂಸ್ಕೃತಿಕ ನಾಯಕ ಎಂದು ಘೋಷಿಸಿರುವುದೇ ಸಾಕ್ಷಿ. ರಾಜ್ಯದಲ್ಲಿ ಬಸವ ತತ್ವದಂತೆ ಜೀವನ ರೂಪಿಸಿಕೊಂಡರೆ ಕರ್ನಾಟಕವು ಕಲ್ಯಾಣ ಕರ್ನಾಟಕವಾಗಲಿದೆ. ಬಸವಣ್ಣ ಸರ್ವ ಸಮಾಜದವರನ್ನು, ಮಹಿಳೆಯರನ್ನು ತನಗಿಂತ ಹಿರಿಯರೆಂದು ಭಾವಿಸಿ, ನುಡಿದಂತೆ ನಡೆದ ಮಹಾದಾರ್ಶನಿಕರು. ಅವರಿವರೆನ್ನದೆ ಎಲ್ಲರೂ ಒಗ್ಗಟ್ಟಾಗಿ ಸಮಾಜದ ಏಳ್ಗೆಗೆ ಮುಂದಾಗಬೇಕು ಎಂದರು.

ಸಮಾಜದ ಮುಖಂಡರಾದ ಡಾ.ಮಹಾಬಲೇಶ್ವರ ರೆಡ್ಡಿ, ಉಪನ್ಯಾಸಕ ಬಸವರಾಜ, ಬಸವಕಿರಣ, ಕಾಶಿನಾಥಯ್ಯ, ಚಂದ್ರಶೇಖರ, ಮಧುರಚನ್ನಶಾಸ್ತ್ರಿ ಇತರರು ಮಾತನಾಡಿದರು. ಸಮಾಜದ ಬಿ.ಜಿ.ಈಶ್ವರಪ್ಪ, ರೇವಣಸಿದ್ದಪ್ಪ, ಮಾನಳ್ಳಿ ಬಸವರಾಜ, ಅಂಬನಗೌಡ, ಮಲ್ಲೇಶಪ್ಪ, ಕಾಶಿನಾಥ, ಸೋದವಿರೂಪಾಕ್ಷ ಗೌಡ, ಜಂಗಮಣಿ ಇತರರು ಇದ್ದರು.

# ಹಂಪಿ ಮಾರ್ಗವಾಗಿ ಅಯೋಧ್ಯೆಗೆ ರೈಲು

## ಹೊಸಪೇಟೆ-ಅಯೋಧ್ಯೆಗೆ 2270 ಕಿ.ಮೀ ಅಂತರ | ನೇರ ಸಂಚಾರಕ್ಕೆ ಒತ್ತಾಯ

**ಹಂಪಿ ಟೈಮ್ಸ್ ಹೊಸಪೇಟೆ:**

ರಾಮಮಂದಿರ ಉದ್ಘಾಟನೆಯ ನಂತರ ಕರ್ನಾಟಕದ ಭಕ್ತರು ಅಯೋಧ್ಯ ಶ್ರೀ ರಾಮ ದರ್ಶನಕ್ಕೆ ಹೋಗಿಬರಲು ಅನುಕೂಲವಾಗುವಂತೆ ಜ.31 ರಿಂದ ಒಂದು ತಿಂಗಳ ಕಾಲ ವಿಶೇಷ ರೈಲು ಆರಂಭಿಸಲು ನೈರುತ್ಯ ರೈಲ್ವೆ ವಲಯವು ನಿರ್ಧರಿಸಿದ್ದು, ಕೇಂದ್ರ ರೈಲ್ವೆ ಸಚಿವಾಲಯದ ಅನುಮೋದನೆಗಾಗಿ ಕಳುಹಿಸಲಾಗಿದೆ. ಬೆಂಗಳೂರು, ಮೈಸೂರು, ತುಮಕೂರು, ಚಿತ್ರದುರ್ಗ ಹಾಗೂ ಬೆಳಗಾವಿಯಿಂದ ಆರಂಭವಾಗುವ ಎಲ್ಲಾ ರೈಲುಗಳು ಹೊಸಪೇಟೆ ಮಾರ್ಗವಾಗಿ ಸಂಚರಿಸುವಂತೆ ವೇಳಾ ಪಟ್ಟಿ ಮತ್ತು ದಿನಾಂಕವನ್ನು ನಿಗದಿಪಡಿಸಲಾಗಿದೆ ಎಂದು ವಿಜಯನಗರ ರೈಲ್ವೆ ಅಭಿವೃದ್ಧಿ ಕ್ರಿಯಾ ಸಮಿತಿ ಅಧ್ಯಕ್ಷ ವೈ.ಯಮುನೇಶ, ಕಾರ್ಯದರ್ಶಿ ಕೆ.ಮಹೇಶ ತಿಳಿಸಿದ್ದಾರೆ.

ಕರ್ನಾಟಕದಿಂದ 11 ರೈಲುಗಳು ಅಯೋಧ್ಯಗೆ ಮತ್ತು ಅಯೋಧ್ಯೆಯಿಂದ ಮರಳಿ ಸದರಿ ನಿಲ್ದಾಣಗಳಿಗೆ ಹಿಂದಿರುಗಲಿವೆ. ಹೊಸಪೇಟೆ-ಅಯೋಧ್ಯೆಗೆ 2270 ಕಿ.ಮೀ ಅಂತರವಿದೆ. ಹೊಸಪೇಟೆ(ಹಂಪಿ-ಅಂಜನಾದ್ರಿ)-ಅಯೋಧ್ಯೆ ನಡುವೆ ನೇರ ರೈಲು ರಾಮಾಂಜಿನೇಯ



ಎಕ್ಸ್‌ಪ್ರೆಸ್ ಆರಂಭಿಸುವಂತೆ ವಿಜಯನಗರ ರೈಲ್ವೆ ಅಭಿವೃದ್ಧಿ ಕ್ರಿಯಾ ಸಮಿತಿ ಕಳೆದ ನವೆಂಬರ್ ತಿಂಗಳಲ್ಲೇ ನೈರುತ್ಯ ರೈಲ್ವೆ ವಲಯ ಪ್ರಧಾನ ವ್ಯವಸ್ಥಾಪಕರಿಗೆ ಮನವಿ ಸಲ್ಲಿಸಲಾಗಿತ್ತು. ಡಿಸೆಂಬರ್ ಮತ್ತು ಜನವರಿ ತಿಂಗಳಲ್ಲಿ 4 ಬಾರಿ ಪ್ರಧಾನ ವ್ಯವಸ್ಥಾಪಕರು ಮತ್ತು ರೈಲ್ವೆ ಸಚಿವರಿಗೆ ಟ್ವಿಟರ್(ಎಕ್ಸ್) ಮೂಲಕ ಸತತವಾಗಿ ಒತ್ತಾಯಪಡಿಸಲಾಗಿದೆ. ಹಂಪಿ-ಅಯೋಧ್ಯೆಗೆ ನೇರ ರೈಲು ಸಂಪರ್ಕ ದೊರೆಯುವ ನಿರೀಕ್ಷೆ ಇದೆ ಎಂದು ತಿಳಿಸಿದ್ದಾರೆ.

**ಹೊಸಪೇಟೆ ಮಾರ್ಗವಾಗಿ ಆಯೋಧ್ಯೆಗೆ ತೆರಳುವ ರೈಲುಗಳು**

1) ಸರ್ ಎಂ.ವಿಶ್ವೇಶ್ವರಯ್ಯ ಬೆಂಗಳೂರು ನಿಲ್ದಾಣ-ಅಯೋಧ್ಯ ಜ.31, ಫೆ.14, ಮತ್ತು 28 ರಂದು ಅರಸಿಕೆರೆ, ರಾಯದುರ್ಗ, ಮಾರ್ಗವಾಗಿ ಮಧ್ಯಾಹ್ನ 3:00ಗಂಟೆಗೆ ಹೊಸಪೇಟೆಗೆ ಆಗಮಿಸಿ ಇಲ್ಲಿಂದ ಗದಗ, ವಿಜಯಪುರ ಮಾರ್ಗವಾಗಿ ಅಯೋಧ್ಯ ಧಾಮ ತಲುಪಲಿದೆ.

2) ಮೈಸೂರು-ಅಯೋಧ್ಯ ಫೆ.04, 17, 18 ರಂದು ಬೆಂಗಳೂರು, ಅರಸಿಕೆರೆ, ಹೊಸಪೇಟೆ ಮಾರ್ಗವಾಗಿ ಅಯೋಧ್ಯ ತಲುಪಲಿದೆ.

3) ತುಮಕೂರು-ಅಯೋಧ್ಯ ಫೆ. 07 ಮತ್ತು 21 ರಂದು ಹಾಗೂ ಚಿತ್ರದುರ್ಗ-ಅಯೋಧ್ಯ ಫೆ.11 ಮತ್ತು 21 ರಂದು ಹೊಸಪೇಟೆ ಮಾರ್ಗವಾಗಿ ಸಂಚರಿಸಲಿದೆ. 4) ಬೆಳಗಾವಿ-ಅಯೋಧ್ಯ ರೈಲು ಫೆ. 17 ರಂದು ಹುಬ್ಬಳ್ಳಿ ಮಾರ್ಗವಾಗಿ ಸಂಜೆ: 04:40ಕ್ಕೆ ಹೊಸಪೇಟೆಗೆ, ನಂತರ ಬಳ್ಳಾರಿ, ರಾಯಚೂರು ಮಾರ್ಗವಾಗಿ ಅಯೋಧ್ಯ ತಲುಪಲಿದೆ.

# ತುಂಗಭದ್ರಾ ಕಾಲುವೆಗೆ ನೀರು ಹರಿಸಲು ತಿರ್ಮಾನ

## ಕುಡಿಯುವ ನೀರು ಮತ್ತು ಬೆಳೆ ಸಂರಕ್ಷಣೆಗೆ ಆದ್ಯತೆ | ಮೂರು ಜಿಲ್ಲೆ ಶಾಸಕರು, ಸಚಿವರು ಭಾಗಿ

**ಹಂಪಿ ಟೈಮ್ಸ್ ಹೊಸಪೇಟೆ**

ನೀರಾವರಿ ಸಲಹಾ ಸಮಿತಿ ಅಧ್ಯಕ್ಷ ಸಚಿವ ಶಿವರಾಜ ಎಸ್.ತಂಗಡಗಿ ಅಧ್ಯಕ್ಷತೆಯಲ್ಲಿ ವಿಧಾನ ಸೌಧ ಸಮ್ಮೇಳನ ಸಭಾಂಗಣದಲ್ಲಿ ಶುಕ್ರವಾರ ತುಂಗಭದ್ರಾ ಯೋಜನೆಯ 120ನೇ ತುರ್ತು ನೀರಾವರಿ ಸಲಹಾ ಸಮಿತಿ ಸಭೆ ನಡೆಯಿತು. ತುಂಗಭದ್ರಾ ಎಡದಂಡೆ, ತುಂಗಭದ್ರಾ ಬಲದಂಡೆ ಕೆಳಮಟ್ಟದ ಮತ್ತು ಮೇಲ್ಮಟ್ಟದ ಕಾಲುವೆಗಳಿಗೆ ಹಂತ ಹಂತವಾಗಿ ನೀರು ಹರಿಸುವ ಮೂಲಕ ಬೇಸಿಗೆ ಕಾಲದಲ್ಲಿ ಕುಡಿಯುವ ನೀರು ಪೂರೈಕೆ, ಹಾಗೂ ಈಗಿನ ಬೆಳೆಗಳ ಸಂರಕ್ಷಣೆಗೆ ನೀರು ಕಾಯ್ದಿರಿಸಬೇಕೆಂದು ಸಚಿವ ಜಮೀರ್‌ಅಹ್ಮದ್‌ಖಾನ್, ಶಾಸಕ ಎಚ್.ಆರ್. ಗವಿಯಪ್ಪ ಒತ್ತಾಯಿಸಿದರು. ವಿಸ್ತೃತ ಚರ್ಚೆ ನಂತರ ನಿರ್ಣಯಗಳನ್ನು ಕೈಗೊಂಡರು.

**ತುಂಗಭದ್ರಾ ಎಡದಂಡೆ ವಿಜಯನಗರ ಕಾಲುವೆ:**

0.300 ಟಿ.ಎಂ.ಸಿ ನೀರನ್ನು ಕುಡಿಯುವ ಸಲುವಾಗಿ ಕಾಯ್ದಿರಿಸಲಾದ 0.500 ಟಿ.ಎಂ.ಸಿ ನೀರಿನಲ್ಲಿ ದಿನಾಂಕ:22.01.2024 ರಿಂದ 30.04.2024 ರವರೆಗೆ 50 ಕ್ಯೂಸೆಕ್ಸ್ ಆನ್ ಅಂಡ್ ಆಫ್ ನಂತೆ (ಕುಡಿಯುವ ನೀರೊಳಗೊಂಡು) ಉಳಿದಂತೆ ರಾಯಚೂರು ಜಿಲ್ಲೆಗೆ ಹಂಚಿಕೆಯಾದ 1.200 ಟಿ.ಎಂ.ಸಿ. ನೀರನ್ನು ದಿನಾಂಕ: 15.02.2024 ರಿಂದ 25.02.2024 ರವರೆಗೆ 0.600 ಟಿಎಂಸಿ ಮತ್ತು ದಿನಾಂಕ 10.04.2024 ರಿಂದ



20.04.2024 ವರೆಗೆ 700 ಕ್ಯೂಸೆಕ್ ನಂತೆ 0.600 ಟಿ.ಎಂ.ಸಿ ಕುಡಿಯುವ ಸಲುವಾಗಿ ಹರಿಸಬಹುದಾಗಿದೆ.

**ತುಂಗಭದ್ರಾ ಬಲದಂಡೆ ಕೆಳಮಟ್ಟದ ಕಾಲುವೆ :**

ದಿನಾಂಕ:21.01.2024 ರಿಂದ 31.01.2024 ರವರೆಗೆ 100 ಕ್ಯೂಸೆಕ್ಸ್ ನಂತೆ ಮತ್ತು ಫೆಬ್ರವರಿ-2024 ಮತ್ತು ಮಾರ್ಚ್-2024 ತಿಂಗಳಲ್ಲಿ 10 ದಿನಗಳಿಗೊಮ್ಮೆ 100 ಕ್ಯೂಸೆಕ್ಸ್ ನಂತೆ ಕುಡಿಯುವ ನೀರಿನ ಸಲುವಾಗಿ ಬಳ್ಳಾರಿ ನಗರ ಹಾಗೂ ಜಿಲ್ಲೆಯ ಇತರೆ ಕುಡಿಯುವ ನೀರಿನ ಯೋಜನೆಗೆ ಹಾಗೂ ಕೆರೆಕಟ್ಟೆಗಳನ್ನು ತುಂಬಿಸುವುದು.

**ರಾಯ ಬಸವಣ್ಣ ಕಾಲುವೆ:**

ವಿಜಯನಗರ ಜಿಲ್ಲೆಗೆ 0.500 ಹಂಚಿಕೆಯಾದ 1.500 ಟಿಎಂಸಿ ನೀರಿನಲ್ಲಿ ದಿನಾಂಕ:21.01.2024 ರಿಂದ 30.05.2024 ರವರೆಗೆ 100 ಕ್ಯೂಸೆಕ್ಸ್ ನಂತೆ ಆನ್ ಅಂಡ್ ಆಫ್ ನಂತೆ ಕುಡಿಯುವ ನೀರೊಳಗೊಂಡು ಹರಿಸಬಹುದಾಗಿದೆ ಎಂದು ಸಭೆಯ ಸಭಾಧ್ಯಕ್ಷರು ತಿಳಿಸಿದ್ದಾರೆ. ಸಚಿವರಾದ ಜಮೀರ್ ಅಹಮದ್ ಖಾನ್, ಶಿವರಾಜ್ ತಂಗಡಗಿ, ಬೋಸರಾಜು, ವಿಜಯನಗರ ಜಿಲ್ಲಾ ಉಸ್ತ್ರುವಾರಿ ಸಚಿವ ಜಮೀರ್ ಅಹ್ಮದ್ ಖಾನ್, ಶಾಸಕರಾದ ಎಚ್.ಆರ್.ಗವಿಯಪ್ಪ, ಜನಾರ್ಧನರೆಡ್ಡಿ, ರಾಘವೇಂದ್ರ ಹಿಟ್ನಾಳ್ ಸೇರಿದಂತೆ ಮೂರು ಜಿಲ್ಲೆಗಳ ಶಾಸಕರು ಉಪಸ್ಥಿತರಿದ್ದರು.


HAMPI TIMES VIJAYANAGARA
ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ
ನಿಮ್ಮ ಹಂಪಿ ಪ್ರವಾಸ ಅನುಭವ
ನೀವು ಹಂಪಿಗೆ ಭೇಟಿ ನೀಡಿದ್ದೀರಾ? ಈ ಹಿಂದೆ ಹಂಪಿ ಹೇಗಿತ್ತು, ಈಗ ಹೇಗಾಗಿದೆ, ಮುಂದೆ ಏನೆಲ್ಲಾ ಸೌಲಭ್ಯಗಳು ಪ್ರವಾಸಿಗರಾಗಿ ನೀವು ನಿರೀಕ್ಷಿಸುತ್ತೀರಿ?
ನಿಮ್ಮದೆ ಅಭಿಪ್ರಾಯಗಳನ್ನು ಕಳುಹಿಸಿ, ಹಂಪಿ ಟೈಮ್ಸ್ ಮೂಲಕ ಸಂಬಂಧಿಸಿದ ಅಧಿಕಾರಿಗಳ ಗಮನ ಸೆಳೆಯಿರಿ.
ಹಂಪಿ ಪ್ರವಾಸೋದ್ಯಮ ಅಭಿವೃದ್ಧಿಗೆ ನಿಮ್ಮ ಅಮೂಲ್ಯ ಸಲಹೆ ಸೂಚನೆಗಳನ್ನು ನೀಡುವುದರೊಂದಿಗೆ ಪ್ರವಾಸೋದ್ಯಮ ಪ್ರಗತಿಗೆ ಸಹಕರಿಸಿ.
ನಿಮ್ಮ ಅಭಿಪ್ರಾಯದೊಂದಿಗೆ ಹಂಪಿಗೆ ಭೇಟಿ ನೀಡಿದ ಕ್ಷಣದ ನಿಮ್ಮ ಫೋಟೊ ಇರಲಿ. ನಿಮ್ಮ ಅಭಿಪ್ರಾಯಗಳನ್ನು ಈ ಕೆಳಗಿನ ಇ-ಮೇಲ್/ ವಾಟ್ಸಪ್‌ಗೆ ಕಳುಹಿಸಿರಿ.
www.hampitimes.com
epaper.hampitimes.com
hampitimes@gmail.com
@hampitimes
9448633038

## ವಚನ ಅರಿವು


### ಹಂಗು ಮೀರಿದ ನಡೆ

**ಹಂದೆಯಲ್ಲ ನಾನು, ಹರುಷದ ಧೈರ್ಯವುಳ್ಳ ಹೆಣ್ಣು ನಾನು.**
**ಕಾಮವನಳಿದವಳಾನಾದ ಕಾರಣ, ಬಸವನ**
**ಹಂಗೆನಗಿಲ್ಲವಯ್ಯಾ,**
**ಭ್ರಮೆಯಡಗಿ ಕಲೆ ನಷ್ಟವಾಗಿ ಮುಖವರತು**
**ಮನವಿಚಾರವ ಕಂಡೆನಯ್ಯ ಸಂಗಯ್ಯ.**
**– ನೀಲಮ್ಮ**

ಜೀವನಕ್ಕೆ ಹೆದರುವ ಹೇಡಿಯಲ್ಲ, ಎಲ್ಲವನ್ನು ಸಂತೋಷದಿಂದ ಎದುರಿಸುವ ಧೈರ್ಯದ ಹೆಣ್ಣು ನಾನು. ಏಕೆಂದರೆ ಮನಸ್ಸಿನಲ್ಲಿರುವ ಕಾಮ, ಭ್ರಮೆಯನ್ನು ಕಳೆದುಕೊಂಡು ಸ್ಪಷ್ಟವಾಗಿದ್ದೇನೆ. ಶರಣ ಜೀವನ ಮಾರ್ಗ ಅನುಸರಿಸುತ್ತಿದ್ದೇನೆ. ನನಗೆ ಈ ಜೀವನದ ಹುಸಿಗಳ ಹೆದರಿಕೆಯಿಲ್ಲ. ಈ ಲೋಕದ ಕುಟಿಲ ಭ್ರಮೆಗಳ ಕಲೆಯೂ ಇಲ್ಲದಂತೆ ಅಳಿಸಿ ಹಾಕಿರುವೆ. ಮನಸ್ಸು ಅರಿವಿನ ದಾರಿಯಲ್ಲಿದೆ. ಹಾಗಾಗಿ ಗಂಡನಾದ ಬಸವಣ್ಣನ ಹಂಗೂ ಇಲ್ಲ ಎಂದು ಆತ್ಮ ವಿಶ್ವಾಸದಿಂದ ಈ ವಚನದಲ್ಲಿ ಹೇಳುತ್ತಾಳೆ ನೀಲಮ್ಮ.

(ಡಾ. ನಂದೀಶ್ವರ ದಂಡೆ ಅವರ ವಚನ ಜೀವನ ಮಾರ್ಗ ಪುಸ್ತಕದಿಂದ)

## ಬಸವಣ್ಣ, ಕನಕದಾಸ, ಅಂಬೇಡ್ಕರ್, ವೇಮನ ಯಾರೂ ಒಂದು ಜಾತಿಗೆ ಸೀಮಿತರಾಗದೆ- ಮನುಕುಲಕ್ಕೆ ಸೇರಿದವರು: ಸಿಎಂ ಸಿದ್ದರಾಮಯ್ಯ



**ಬೆಂಗಳೂರು:** ಬಸವಣ್ಣ, ಕನಕದಾಸ, ಅಂಬೇಡ್ಕರ್, ವೇಮನ ಯಾರೂ ಒಂದು ಜಾತಿಗೆ ಸೀಮಿತರಾದವರಲ್ಲ. ಇವರೆಲ್ಲರೂ ವಿಶ್ವ ಮಾನವರು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ನುಡಿದರು.

ರವೀಂದ್ರ ಕಲಾಕ್ಷೇತ್ರದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಆಯೋಜಿಸಿದ್ದ ಶ್ರೀ ಮಹಾಯೋಗಿ ವೇಮನ ಜಯಂತಿಯನ್ನು ಉದ್ಘಾಟಿಸಿ ಮಾತನಾಡಿದರು. ವೇಮನರಾದಿಯಾಗಿ ಬಸವಾದಿ ಶರಣರು ಮನುಕುಲದ ಆಸ್ತಿ. ಪ್ರತೀ ಮಗುವೂ ಹುಟ್ಟುತ್ತಾ ವಿಶ್ವ ಮಾನವ. ಬೆಳೆಯುತ್ತಾ ಅಲ್ಪಮಾನವರಾಗಿ ಬಿಡುತ್ತಾರೆ ಎಂದು ಕುವೆಂಪು ಹೇಳಿರುವ ಮಾತು ಸತ್ಯ. ವೇಮನ ಅವರು ಆಕಸ್ಮಿಕವಾಗಿ ರೆಡ್ಡಿ ಸಮುದಾಯದಲ್ಲಿ ಹುಟ್ಟಿದ್ದರೂ ಅವರು ಇಡಿ ಮನುಕುಲಕ್ಕೆ ಬೇಕಾದವರಾಗಿದ್ದರು ಎಂದು ವಿವರಿಸಿದರು. ಶಿಕ್ಷಣ ಕಲಿತು ನಾವು ಮೌಢ್ಯ ಆಚರಿಸಬಾರದು. ಶಿಕ್ಷಣದ ಬೆಳಕಿನಿಂದ ನಾವು ಮೌಢ್ಯದಿಂದ ಹೊರಗೆ ಬರಬೇಕು.

ರೆಡ್ಡಿ ಜನ ಸಂಘದ ಶಿಕ್ಷಣ ಸಂಸ್ಥೆಗೆ ಜಮೀನು ಒದಗಿಸಲು ಸರ್ಕಾರ ಸಿದ್ದವಿದೆ. ರಾಜ್ಯದ ಮೊದಲ ಮುಖ್ಯಮಂತ್ರಿ ಕೆ.ಸಿ.ರೆಡ್ಡಿ ಅವರ ಪುತ್ಥಳಿಯನ್ನು ವಿಧಾನಸೌಧದಲ್ಲಿ ಹಾಕಲು ಅವಕಾಶ ಕಲ್ಪಿಸಿದ್ದು ನಮ್ಮ ಅವಧಿಯಲ್ಲೇ ಎಂದರು.

ನಾನು ಮೊದಲ ಬಾರಿ ಮುಖ್ಯಮಂತ್ರಿ ಆದಾಗ ಸರ್ಕಾರವೇ ವೇಮನ ಜಯಂತಿ ಆಚರಿಸಲು ಆದೇಶಿಸಿದ್ದೆ . ನಮ್ಮ ಸರ್ಕಾರ ಎಲ್ಲಾ ಜಾತಿ ಮತ್ತು ಧರ್ಮದ ಬಡವರ ಪರವಾಗಿ ಇರುತ್ತದೆ. ಎಲ್ಲಾ ಜಾತಿಯ ಬಡವರು ಮತ್ತು ಮಧ್ಯಮ ವರ್ಗದವರ ಪರವಾಗಿ ನಮ್ಮ ಸರ್ಕಾರ ಕಾರ್ಯಕ್ರಮಗಳನ್ನು ರೂಪಿಸುತ್ತಿದೆ, ಜಾರಿಗೆ ತರುತ್ತಿದೆ ಎಂದು ವಿವರಿಸಿದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವ ಶಿವರಾಜ್ ತಂಗಡಗಿ, ಸಾರಿಗೆ ಸಚಿವ ರಾಮಲಿಂಗಾರೆಡ್ಡಿ, ಕರ್ನಾಟಕ ರೆಡ್ಡಿ ಜನಸಂಘದ ಅಧ್ಯಕ್ಷರಾದ ಎಸ್.ಜಯರಾಮ ರೆಡ್ಡಿ, ಗಂಗಾವತಿ ಶಾಸಕರಾದ ಜನಾರ್ಧನರೆಡ್ಡಿ, ಮಾಜಿ ಸಚಿವ ಎಚ್.ಎಂ. ರೇವಣ್ಣ ಉಪಸ್ಥಿತರಿದ್ದರು. ಲೇಖಕಿ ಹಾಗೂ ಜನಪದ ತಜ್ಞೆ ಡಾ.ಕೆ.ಆರ್.ಸಂಧ್ಯಾ ರೆಡ್ಡಿ ಅವರು ವಿಶೇಷ ಉಪನ್ಯಾಸ ನೀಡಿದರು.

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

ಸಂಪಾದಕರು

**ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.**
ಇ-ಮೇಲ್:hampitimes@gmail.com
M: 9448633038

**ಪರಿಸರವನ್ನು ಇದೇ ರೀತಿ ನಾವು ನಾಶಮಾಡುತ್ತಾ ಸಾಗಿದರೆ ಮುಂದಿನ ಹನ್ನೆರಡು ವರ್ಷಗಳಲ್ಲಿ ಬದುಕು ತುಂಬಾ ಸಂಕಷ್ಟಕ್ಕೆ ಒಳಗಾಗುವುದರಲ್ಲಿ ಅನುಮಾನವೇ ಇಲ್ಲ. ಸಂದಿಗ್ಧ ಸಮಯದಲ್ಲಿ ಮಾನವ ಸಂಕುಲ ಉಳಿಯಬೇಕು ಅನ್ನುವುದಾದರೆ, ಅದನ್ನ ಸರಿಪಡಿಸಿಕೊಳ್ಳಲು ಈಗಲೂ ಸಾಧ್ಯವಿದೆ. ಅದು ನಮ್ಮ ಕೈಯಲ್ಲಿಯೇ ಇದೆ. ತಪ್ಪುಗಳು ಎಲ್ಲಿ ಆಗಿವೆ ಎಂಬುದನ್ನು ಗುರುತಿಸಿಕೊಳ್ಳಬೇಕು. ಆಗಿದ್ದನ್ನು ಒಪ್ಪಿಕೊಳ್ಳಬೇಕು. ಆ ತಪ್ಪುಗಳನ್ನು ತಿದ್ದಿಕೊಂಡು ಮುಂದೆ ಸಾಗಬೇಕು. ಇಲ್ಲದೇ ಹೋದರೆ ಮುಂದಿನ ಕೆಲವೇ ವರ್ಷಗಳಲ್ಲಿ ಮಾನವನ ಜೊತೆ ಯಾವ ಜೀವಿಯೂ ಈ ಭೂಮಿ ಮೇಲೆ ಬದುಕುಳಿಯಲಾರದು.**

# ಮಕ್ಕಳಲ್ಲೂ ಪರಿಸರ ಪ್ರಜ್ಞೆ ಬೆಳೆಸಬೇಕು



ವಿಶ್ವದ ಶ್ರೇಷ್ಠ ಸಂತ ಬುದ್ಧನು 'ಆಸೆಯೇ ದುಃಖಕ್ಕೆ ಕಾರಣ' ಎಂದು ಬಹು ಹಿಂದೆಯೇ ಹೇಳಿದ್ದಾನೆ. ಮನುಷ್ಯನ ದಾಹಕ್ಕೆ ಪರಿಸರವೆಲ್ಲಾ ಸಿಲುಕಿ ನರಳುತ್ತಿವೆ. ಮನುಷ್ಯನ ದುರಾಸೆಯಿಂದ ತಾಪಮಾನ ಹೆಚ್ಚಾಗಿ ಹಿಮಗಡ್ಡೆ ಕರೆಯುತ್ತಿವೆ. ಸಮುದ್ರ ಮಟ್ಟ ದಿನದಿಂದ ದಿನಕ್ಕೆ ಏರುತ್ತಿದೆ. ಸೈಕ್ಲೋನ್‌ಗಳು ಅಕಾಲಿಕವಾಗಿ ಬರುತ್ತಿವೆ. ಹುಚ್ಚು ಮಳೆ ತನಗೆ ಬೇಕಾದಾದ ಬೇಕಾದಷ್ಟು ಸುರಿಯುತ್ತಿದೆ. ಗುಡ್ಡಗಳ ಜೊತೆ ಭೂಮಿಯೂ ಎಲ್ಲಿಬೇಕೆಂದಲ್ಲಿ ಕುಸಿಯುತ್ತಿದೆ. ಒಂದೇ ವಾಕ್ಯದಲ್ಲಿ ಹೇಳುವುದಾದರೆ ಎಲ್ಲವೂ ಕೊಚ್ಚಿ ಹೋಗುತ್ತಾ ಮಾನವನ ಬದುಕು ದಿನದಿಂದ ದಿನಕ್ಕೆ ದುಸ್ಥರವಾಗುತ್ತಿದೆ.

ಮಾನವನು ಸಮಾಜಜೀವಿ ಎನ್ನುವುದರ ಜೊತೆಗೆ ಅವನು ಪರಿಸರ ಅಥವಾ ಪ್ರಕೃತಿಯ ಕೂಸು. ಅವನ ಸುತ್ತಮುತ್ತಲು ವೈವಿಧ್ಯಮಯ ನಿಸರ್ಗದ ಸೊಬಗು ಇದೆ. ಹಸಿರನ್ನು ಹೊದ್ದಿರುವ ಹಲವಾರು ಮರಗಿಡಗಳಿವೆ. ವಿವಿಧ ಪ್ರಕಾರ ಪ್ರಾಣಿಪಕ್ಷಿಗಳಿವೆ. ಅಲ್ಲದೆ ನಾನಾಬಗೆಯ ಕೀಟ ಪ್ರಪಂಚವಿದೆ. ಈ ಜೀವಿಗಳೇ ಅಲ್ಲದೆ ಹಲವಾರು ಮಹಾನದಿ, ಸಾಗರ, ಸರೋವರಗಳಿವೆ. ದೊಡ್ಡ ದೊಡ್ಡ ಪರ್ವತ ಶಿಖರಗಳಿವೆ. ಗಾಳಿ, ಬೆಳಕು ಹಾಗು ಖನಿಜ ಸಂಪತ್ತನ್ನೊಳಗೊಂಡ ಪ್ರಕೃತಿ ಮಾತೆ ಇದೆ. ಇವೆಲ್ಲವೂ ನಮ್ಮಗಳ ಬದುಕಿನಲ್ಲಿ ವಹಿಸುವ ಮಹತ್ತರ ಪಾತ್ರಗಳ ಅರಿವಿದ್ದರೂ, ಅವುಗಳನ್ನು ಹಾಳುಮಾಡುತ್ತಾ, ಸರಿಸರದ ಸಮತೋಲವನ್ನು ಹದಗೆಡಿಸಿ ತನ್ನ ಅವನತಿಯತ್ತ ವೇಗವಾಗಿ ಚಲಿಸುತ್ತಿರುವುದು ಯಾರ ಕಣ್ಣಿಗೂ ನೇರವಾಗಿ ಕಾಣುತ್ತಿಲ್ಲ.

ಈ ಪ್ರಕೃತಿಯ ಜೀವಜಾಲವನ್ನು ಸೃಷ್ಟಿಸಿದವನು ಮಾನವನಲ್ಲ. ಅವನು ಆ ಜಾಲದಲ್ಲಿ ಒಂದು ಎಳೆ ಮಾತ್ರ. ಪರಿಸರ ಎಂಬ ಈ ಜೀವಜಾಲದಲ್ಲಿ ಜೀವಿಗಳು ಒಂದನ್ನೊಂದು ಪ್ರತ್ಯಕ್ಷ ಅಥವ ಪರೋಕ್ಷವಾಗಿ ಅವಲಂಬಿಸಿ ಪರಸ್ಪರ ಪ್ರಭಾವಿಸುತ್ತಿರುತ್ತವೆ. ಈ ರೀತಿಯ ಪರಸ್ಪರ ಅವಲಂಬನೆಯು ಸಕಲ ಜೀವಿಗಳನ್ನೂ ಆಹಾರ ಸರಪಳಿಯ ರೂಪದಲ್ಲಿ ಬೆಸೆದು, ಅವುಗಳ ಪರಸ್ಪರ ಪ್ರಭಾವಗಳನ್ನು ಇನ್ನೂ ನಿಕಟಗೊಳಿಸಿ ಜೀವಜಾಲವನ್ನಾಗಿಸುವಂತೆ ಮಾಡುವುದಕ್ಕೆ ಪರಿಸರ ಪ್ರಜ್ಞೆ ಎನ್ನಲಾಗಿದೆ. ಪ್ರಜ್ಞೆ ಎಂದರೆ ಅರಿವು, ತಿಳುವಳಿಕೆ, ಸಂವೇದನೆಯ ಜ್ಞಾನವನ್ನು ತಿಳಿಸುತ್ತದೆ. ಹಾಗಾಗಿ ಬುದ್ಧಿ –ಭಾವಗಳನ್ನು, ಸೂಕ್ಷ್ಮ ಅರಿವಿನ ಜೀವಗಳ ಜೀವಸಂವೇದನೆಯ ಮಾರ್ಗವೇ ಪ್ರಜ್ಞೆ ಎಂದು ಕರೆಯಲಾಗುತ್ತದೆ. ಪರಿಸರ ಪ್ರಜ್ಞೆಯಿಂದಾಗಿ ನಮ್ಮ ಸುತ್ತಮುತ್ತಲಿನ ಪರಿಸರ ಸಮಸ್ಯೆಗಳನ್ನು ಗುರುತಿಸುವುದರ ಜೊತೆಗೆ ಆ ಸಮಸ್ಯೆಗಳಿಗೆ ಪರಿಹಾರ ಹುಡುಕುವ ಸಾಮರ್ಥ್ಯವನ್ನು ಬಲಪಡಿಸಬಹುದಾಗಿದೆ.

ನಮ್ಮ ಪೂರ್ವಜರು ಪರಿಸರದ ಬಗ್ಗೆ ಅಪಾರ ಗೌರವವನ್ನು ಹೊಂದಿದ್ದರು. ಅವರು ಸೂರ್ಯ–ಚಂದ್ರ, ಗಿಡ – ಮರ, ಪಶು –ಪಕ್ಷಿ, ಪ್ರಾಣಿ, ನದಿ ಎಲ್ಲವನ್ನು ದೇವರೆಂದು ಪರಿಗಣಿಸಿ ಪೂಜಿಸಿದ್ದಾರೆ. ಆದರೆ ಇಂದು ನಮ್ಮಗಳ ಕ್ಷಣಿಕ ಸುಖಕ್ಕೆ ನಾವು ಸಂಪೂರ್ಣವಾಗಿ ಜೀವಿಗಳನ್ನು ಅಳಿವಿನ ಅಂಚಿಗೆ ತಂದು ನಿಲ್ಲಿಸಿದ್ದೇವೆ. ಕ್ಷಣಿಕ ಸುಖ, ಆಧುನಿಕತೆ, ಅಪರಿಮಿತ ವಿಲಾಸೀ ಭೋಗ ಜೀವನಗಳು ಮುಖ್ಯವಾಗಿ ಮುಂದಿನ ಪೀಳಿಗೆಯ ಭವಿಷ್ಯ ನಮಗಾರಿಗೂ ಬೇಡವೇ ಬೇಡವಾಗಿದೆ.

ಪ್ರಸ್ತುತ ದಿನದಲ್ಲಿ ಮಕ್ಕಳಿಗೆ ಸಿಗಬೇಕಾದ ಸಹಜ ಬಾಲ್ಯವನ್ನು ನೀಡುವಲ್ಲಿ ಹೆಮ್ಮೆಯಿಂದ ನಾವು ಕರೆಯುವ ನಾಗರೀಕ ಸಮಾಜ ಹಿಂದಿಬಿದ್ದಿದೆ. ಅವಿಭಕ್ತ ಕುಟುಂಬ ಕಾಣೆಯಾಗಿ ವಿಭಕ್ತ ಕುಟುಂಬವಾಗಿರುವ ಸನ್ನಿವೇಶದಲ್ಲಿ ಮತ್ತು ಸ್ವ ಹಿತಾಸಕ್ತಿಗಾಗಿ ಸಂಪೂರ್ಣ ಪರಿಸರವನ್ನು ಮಲಿನ ಮಾಡುತ್ತಿರುವ ಸಂದಿಗ್ಧ ಪರಿಸ್ಥಿತಿಯಲ್ಲಿ, ವಿಜ್ಞಾನದ ನಾಗಾಲೋಟದಲ್ಲಿ ಮಕ್ಕಳಿಗೆ ಯಾವುದನ್ನು? ಹೇಗೆ? ಎಷ್ಟು? ತಲುಪಿಸಬೇಕು ಎಂಬುದರ ಬಗ್ಗೆಯೂ ಜಿಜ್ಞಾಸೆ ಇದೆ. ಅದರಲ್ಲೂ ಪರಿಸರ ಕುರಿತು ಮಕ್ಕಳಿಗೆ ಸಮರ್ಪಕವಾದ ಪ್ರಜ್ಞೆಯನ್ನು ಮೂಡಿಸುವ ಬಹುದೊಡ್ಡ ಜವಾಬ್ದಾರಿಯನ್ನು ಯಾರೂ ಮರೆಯುವಂತಿಲ್ಲ.

ಹಳ್ಳಿಯ ಮಕ್ಕಳು ಸಮೃದ್ಧ ಪ್ರಕೃತಿ ಸಂವೇದನೆ ಹೊಂದಿರುತ್ತಾರೆ. ಅವರು ಮರಹತ್ತಿ ಕುಣಿಯುತ್ತಾರೆ, ಕೊಳಗಳಲ್ಲಿ ಈಜುತ್ತಾರೆ, ಸಾಕುಪ್ರಾಣಿಗಳ ಜೊತೆ ಆಡುತ್ತಾರೆ. ಹೊಲಗದ್ದೆಗಳಲ್ಲಿ ಕೆಲಸ ಮಾಡುತ್ತಾರೆ, ಅಜ್ಜಿ ಕಥೆಗಳನ್ನು ಕೇಳುತ್ತಾರೆ, ಅನೇಕ ಹಾಡುಗಳನ್ನು ಹಾಡುತ್ತಾರೆ ಹಾಗೂ ನಗರದ ಮಕ್ಕಳು ಕನಸು ಕಾಣಲೂ ಸಾಧ್ಯವಿಲ್ಲದ ಅನೇಕ ಚಟುವಟಿಕೆಗಳಲ್ಲಿ ತೊಡಗಿಕೊಂಡಿರುತ್ತಾರೆ. ನಿರಾತಂಕ ಪರಿಸರ, ದೊಡ್ಡವರ ಹೆಚ್ಚಿನ ಕಿರಿಕಿರಿ ಇಲ್ಲದ ಮತ್ತು ಟಿವಿ ನೋಡುವ ಮತ್ತು ಕಂಪ್ಯೂಟರ್ ಆಟಗಳು ಆಧುನಿಕ ಗೀಳು ಇಲ್ಲದ ಹಳ್ಳಿ ಮಕ್ಕಳು ಪರಿಸರ ಪ್ರಜ್ಞೆ ಮತ್ತು ಯಾಂತ್ರಿಕ ಬದುಕಿಗೆ ಹೊಂದಿಕೊಂಡಿರುವ ನಗರ ಮಕ್ಕಳ ಪರಿಸರ ಪ್ರಜ್ಞೆಯಲ್ಲಿ ಅಜಗಜಾಂತರ ವ್ಯತ್ಯಾಸವನ್ನು ಕಾಣುತ್ತೇವೆ.

ಇಂದಿನ ಮಕ್ಕಳು ಭವಿಷ್ಯದ ನಾಗರೀಕರು. ಅವರಿಗೆ ಬಾಲ್ಯದಲ್ಲಿಯೇ ಪರಿಸರ ಅರಿವನ್ನು ನೀಡುವ ಮೂಲಕ ಮುಂದಿನ ದಿನಗಳಲ್ಲಿ ಅವರ ಜೀವನ ವಿಧಾನದಲ್ಲಿ ಸಾಕಷ್ಟು ಸುಧಾರಣೆಗಳನ್ನು ಕಾಣಬಹುದು. ಸಾಹಿತ್ಯದ ಮುಖಾಂತರ ಪರಿಸರದ ಅರಿವನ್ನು ಮಕ್ಕಳಿಗೆ ಮೂಡಿಸಿದರೆ ಸಾಕು. ಅದು ಮುಂದೆ ಮಕ್ಕಳಲ್ಲಿ ಹೆಚ್ಚು ಅಧ್ಯಯನ ಶೀಲತೆಯನ್ನು ಆಸಕ್ತಿಯನ್ನು ಹುಟ್ಟುಹಾಕುತ್ತದೆ. ಆಗ ಪರಿಸರ ಸಂಬಂಧ ಸಮಸ್ಯೆಗಳಿಗೆ ಮೂಲಭೂತ ಪರಿಹಾರವನ್ನು ಕಂಡುಕೊಳ್ಳುವ ಸಾಮರ್ಥ್ಯವನ್ನು ಮಕ್ಕಳಲ್ಲಿ ಸಹಜವಾಗಿ ವೃದ್ಧಿಯಾಗುತ್ತದೆ. ಸಾಹಿತ್ಯದ ಮೂಲಕ ಭಾಷೆ ಮೇಲೆ ಆಸಕ್ತಿ ಕೆರಳಿಸುವುದರ ಜೊತೆಗೆ ಪರಿಸರದ ಮಹತ್ವವನ್ನು ಅವರಿಗೆ ಮನದಟ್ಟು ಮಾಡಿಸುವ ಹೊಣೆಗಾರಿಕೆ ಹಿರಿಯರ ಮೇಲಿದೆ. ಪರಿಸರ ಉಳಿದರೆ ಮಾತ್ರ ನಮ್ಮ ಉಳಿವು ಎಂಬುದನ್ನು ಮಕ್ಕಳಿಗೆ ಬಾಲ್ಯದಲ್ಲಿಯೇ ಸ್ಪಷ್ಟ ಪಡಿಸಬೇಕಿದೆ. ಪರಿಸರವನ್ನು ಹಾಳು ಮಾಡುವ ಮತ್ತು ಹೊಂದಿಕೊಳ್ಳಲಾಗದ ಜೀವಿ ಅಳಿಯುತ್ತದೆ ಎಂಬುದನ್ನು ಮನವರಿಕೆ ಮಾಡಬೇಕಿದೆ.

ಕೆಲವು ಮಕ್ಕಳು ತಮ್ಮ ಪರಿಸರ ಪ್ರೇಮವನ್ನು ಎಲ್ಲೆಡೆಯೂ ಸಾರುತ್ತಿದ್ದಾರೆ. ಆ ನಿಟ್ಟಿನಲ್ಲಿ ಕೆನಡಾದ ಸೆವರ್ನಾ ಸುಝುಕಿ ಎನ್ನುವ ಬಾಲಕಿಯು "ನಮ್ಮದು ಐದುನೂರು ಕೋಟಿ ಜನ, ಮೂರು ಕೋಟಿ ಜೀವ ಪ್ರಭೇದಗಳ ಕುಟುಂಬ. ಒಂದು ದೊಡ್ಡ ರಾಷ್ಟ್ರದ ಗಡಿಗಳು ರಾಷ್ಟ್ರದ ಗಡಿಗಳು ಎಷ್ಟೇ ಇದ್ದರೂ ಈ ಕುಟುಂಬ ಮಾತ್ರ ಒಂದೇ. ಅದನ್ನು ಬದಲಿಸಲು ಸಾಧ್ಯವಿಲ್ಲ. ಪರಿಸರಕ್ಕೆ ಸಂಕಷ್ಟ ಬಂದರೆ ನಮಗೆಲ್ಲರಿಗೂ ಬಂದಹಾಗೇ. ನಮಗೆಲ್ಲಾ ಒಂದೇ ಬಗೆಯ ನಾಳೆಗಳು ಕಾದಿವೆ. ನಾವೆಲ್ಲರೂ ಒಂದಾದರೆ ಮಾತ್ರ ನಾಳಿನ ಪರಿಸರವನ್ನು ಜೀವಂತ ವಾಗಿರಸಲು ಸಾಧ್ಯ" ಎನ್ನುತ್ತಾಳೆ. ಒಬ್ಬ ಮಗುವಿಗೆ ಅರ್ಥವಾಗಿದ್ದು ದೊಡ್ಡವರಿಗೆ ಅರ್ಥವಾಗದಿರುವುದು ಈ ಶತಮಾನದ ದುರಂತವೇ ಸರಿ.

ಮುಂದಿನ ಪೀಳಿಗೆಯ ಸುಂದರವಾಗಿರಬೇಕು ಎನ್ನುವ ಭಾವನೆ ಎಲ್ಲರಲ್ಲೂ ಇದೆ. ಎಲ್ಲರೂ ಕೂಡ ತಮ್ಮ ದುಡಿಮೆ–ಹೋರಾಟ ತಮ್ಮ ಮಕ್ಕಳಿಗಾಗಿ ಮಾಡುತ್ತಿದ್ದೇವೆ ಎಂದು ಹೇಳುತ್ತಾರೆ. ಆದರೆ ಪರಿಸರದ ವಿಷಯದಲ್ಲಿ ಮುಂದಿನ ದಿನಗಳಲ್ಲಿ ಹೀಗೆ ಇರುತ್ತವೆ ಎಂದು ಹೇಳಲು ಸಾಧ್ಯವಿಲ್ಲ. ನಾವುಗಳು ಇನ್ನಾದರೂ ಎಚ್ಚೆತ್ತುಕೊಳ್ಳಬೇಕಾದ ಅಗತ್ಯತೆ ಇದೆ. ತುರ್ತು ಕ್ರಮಗಳನ್ನು ಕೈಗೊಳ್ಳಬೇಕಿದೆ.

ಈ ಹಿನ್ನೆಲೆಯಲ್ಲಿ ಸ್ವೀಡನ್ನಿನ ಶಾಲಾ ಬಾಲಕಿ ಗ್ರೇತಾ ಥನ್‌ಬರ್ಗ್ ದೊಡ್ಡ ದೊಡ್ಡವರೆಲ್ಲ ಪ್ರಶ್ನೆ ಮಾಡುವ ಹಂತಕ್ಕೆ ಬೆಳೆದು ನಿಂತಿದ್ದಾಳೆ. ಭವಿಷ್ಯದ ಮಕ್ಕಳ ಪ್ರತಿನಿಧಿಯಾಗಿರುವ ಆಕೆ "ನಮ್ಮ ಭವಿಷ್ಯದ ಚೆಲ್ಲಾಟವಾಡಲು ನಿಮಗೆಷ್ಟು ಧೈರ್ಯ? ಎಂದು ದೊಡ್ಡವರನ್ನು ಪ್ರಶ್ನೆ ಮಾಡುತ್ತಿದ್ದಾಳೆ. ಪರಿಸರದ ಕುರಿತಾಗಿ ನಮಗೆ ಪಾಠ ಮಾಡುತ್ತೀರಿ, ನಮ್ಮನ್ನು ನಾಡಿನ ಆಶಾಕಿರಣ ಎಂದು ಹಾಡಿ ಹೊಗಳುತ್ತಿದ್ದಿರಿ. ಆದರೆ ಅಂತಹ ಪೊಳ್ಳು ಮಾತುಗಳಿಂದ ನಮ್ಮನ್ನು ಹಾಗೂ ನಮ್ಮ ಕನಸುಗಳನ್ನು ನಾಶ ಮಾಡುತ್ತಿದ್ದೀರಿ. ಇಂದು ಜನರು ತುಂಬಾ ಸಂಕಷ್ಟದಲ್ಲಿದ್ದಾರೆ. ಪರಿಸರದ ಜೀವಜಾಲ ಅತಂತ್ರವಾಗಿದೆ. ಜೀವಲೋಕ ಯುಗಾಂತ್ಯದತ್ತ ವಾಲುತ್ತಿದೆ ಎನ್ನುವುದು ನನ್ನನ್ನು ಕಾಡುತ್ತಿದೆ. ಪ್ರೀತಿಯ ನೆಪದಲ್ಲಿ ಏನೇನೋ ಕನಸುಗಳನ್ನು ಕಟ್ಟಿದ್ದೀರಿ. ಕಳೆದ 30 ವರ್ಷಗಳಿಂದ ವಿಜ್ಞಾನಿಗಳು, ಪರಿಸರ ತಜ್ಞರು ನಮ್ಮ ಪರಿಸರದ ಬಗ್ಗೆ ಸಾಕಷ್ಟು ಎಚ್ಚರಿಕೆ ನೀಡುತ್ತಿದ್ದಾರೆ. ಆದರೆ ಯಾರು ಅದನ್ನು ಕೇಳಿಸಿಕೊಳ್ಳುತ್ತಿಲ್ಲ. ಹೀಗಾದರೆ ಮುಂದಿನ ಭವಿಷ್ಯವೇನು? ಮಕ್ಕಳ ಭವಿಷ್ಯವನ್ನು ನೀವು ವಂಚಿಸುತ್ತಿದ್ದೀರಿ. ನಿಮ್ಮಗಳ ಕಪಟ ಮೋಸವನ್ನು ಎಳೆಯರಾದ ನಾವು ಅರ್ಥಮಾಡಿಕೊಂಡಿದ್ದೇವೆ. ಮುಂದಿನ ಪೀಳಿಗೆಯ ಎಲ್ಲರ ದೃಷ್ಟಿ ನಿಮ್ಮ ಮೇಲಿದೆ. ಇದೇ ರೀತಿ ತಾವು ಸಾಗಿದರೆ ನಾವು ನಿಮ್ಮನ್ನು ಕ್ಷಮಿಸಲಾರೆವು" ಎನ್ನುತ್ತಾಳೆ. ನಿಜವಾಗಿ ಇಂತಹ ಎಳೆಯರೆಲ್ಲರೂ ಒಗ್ಗೂಡಿ ಧ್ವನಿ ಗಟ್ಟಿ ಮಾಡಿದರೆ ದೊಡ್ಡವರೆಲ್ಲರೂ ಅವರ ಮುಂದೆ ತಲೆ ಎತ್ತುವುದು ಕಷ್ಟವಾಗುತ್ತದೆ.



**ಡಾ.ಪರಮೇಶ್ವರಯ್ಯ ಸೊಪ್ಪಿಮಠ**
**ಶಿಕ್ಷಕರು**
soppi.mata@gmail.com

### ಎಚ್ಚರಿಕೆಯ ಗಂಟೆ

ಪರಿಸರವೂ ತನ್ನ ಮೂಲರೂಪವನ್ನು ಕಳೆದುಕೊಂಡಿದೆ. ಬಹಳ ವಿಚಿತ್ರವೆಂದರೆ ಪರಿಸರ ಪ್ರಜ್ಞೆ, ಎಚ್ಚರ, ಕಾಳಜಿ ಮತ್ತು ಕ್ರಿಯೆಗಳೆಲ್ಲವೂ ಅದನ್ನು ಹಾಳು ಮಾಡುತ್ತಿರುವ ನಾಗರೀಕ ಸಮಾಜದಿಂದ ಹುಟ್ಟುತ್ತಿದೆ. ಪ್ರಕೃತಿ ಮಾನವ ಸಮಾಜದ ಭಾಗವಾಗಿದೆ ಮತ್ತು ಮಾನವ ಸಮಾಜವು ಪ್ರಕೃತಿಯ ಭಾಗವಾಗಿದೆ. ಇವೆರಡರ ನಡುವೆ ಒಂದು ಅವಿನಾಭಾವ ಸಂಬಂಧವಿದೆ. ನಮ್ಮಗಳ ಆತ್ಮಾವಲೋಕನದಿಂದ ಜಾಗೃತಿ ಮೂಡಿಸಬೇಕಾಗಿದೆ. ನಮ್ಮಗಳ ಜೀವನಕ್ಕೆ ಸಂಚಕಾರವಾಗಿರುವ ದುರಾಸೆ, ಹಿಂಸೆ, ವಿನಾಶ ಪ್ರವೃತ್ತಿಗಳು ಇಲ್ಲವಾಗುತ್ತಾ, ಪ್ರಕೃತಿ ಮತ್ತು ಜೀವಿಗಳೊಂದಿಗೆ ಪ್ರೀತಿ, ತ್ಯಾಗ, ಶಾಂತಿಗಳು ಅರಳಬೇಕಿವೆ.

ಭವಿಷ್ಯದಲ್ಲಿ ಪ್ರಕೃತಿಯ ನಾಶದಿಂದಾಗುವ ಪರಿಣಾಮದ ಬಗ್ಗೆ ಪರಿವೆಯೂ ಇಲ್ಲದೆ, ಮುಂದಿನ ಪೀಳಿಗೆಯು ಬದುಕು ಏನಾಗುತ್ತದೆ ಎಂಬ ಆಲೋಚನೆಯನ್ನು ಮಾಡದೆ, ದೊಡ್ಡ ಮಟ್ಟದಲ್ಲಿ ಪರಿಸರವನ್ನು ಅಸಮತೋಲನ ಮಾಡಲಾಗುತ್ತಿದೆ. ಪರಿಸರದ ಸಮಸ್ಯೆ ಇಂದು ಜಗತ್ತಿನ ಜೀವಕಣಗಳ ಜೀವನ್ಮರಣದ ಪ್ರಶ್ನೆಯಾಗಿ ಕಾಣುತ್ತಿದೆ. ಜಗತ್ತಿನ ಮೂಲಭೂತ ಸಮಸ್ಯೆಗಳಲ್ಲಿ ಇಂದು ಮೊಟ್ಟಮೊದಲು ಕಾಣುವುದೇ ಪರಿಸರ ಅಸಮತೋಲನ. ಬಹುತೇಕರು ಗಂಭೀರವಾಗಿ ಇಂದಿಗೂ ಈ ವಿಷಯವನ್ನು ಪರಿಗಣಿಸಿಯೇ ಇಲ್ಲ. ಕೆಲವರು ಮಾತ್ರ ಅಲ್ಲಿ–ಇಲ್ಲಿ ಸ್ವಲ್ಪ ಕಾರ್ಯಯೋಜನೆಗಳನ್ನು ಕೈಗೊಂಡಿದ್ದು ಬಿಟ್ಟರೆ ಪರಿಸರ ರಕ್ಷಣೆ ಬಗ್ಗೆ ಯಾರಿಗೂ ಆಸಕ್ತಿ ಇಲ್ಲದಂತಾಗಿದೆ. ಅದರ ಫಲವಾಗಿ ಅನೇಕ ಜೀವಿಗಳ ಸಂತತಿ ಇಂದು ಉಳಿದಿಲ್ಲ. ಸಾಮಾಜಿಕ ಪರಿಸರ ಸೃಷ್ಟಿಸಿದಂತಹ ಸಮಸ್ಯೆಗಳ ಪರಿಣಾಮದಿಂದಾಗಿ ಮಾನವನು ಇಡೀ ಜೀವ ಸಮುದಾಯವನ್ನೇ ಇಲ್ಲವಾಗಿಸುವಂತಹ ಹಾದಿಯಲ್ಲಿ ಸಾಗುತ್ತಿದ್ದಾನೆ.

ಜಗತ್ತಿನ ಎಲ್ಲಾ ಮುಂದಾಳುಗಳು ಹಣದ ಹಿಂದೆ ಓಡುತ್ತಾ ತಮ್ಮ ದೇಶದ ಅಭಿವೃದ್ಧಿಯನ್ನು ಮಾತ್ರ ಬಯಸುತ್ತಿದ್ದಾರೆ. ಯಾರು ಪರಿಸರದ ಕ್ಷೇಮದ ಬಗ್ಗೆ ಚಿಂತಿಸುತ್ತಿಲ್ಲ. ಹೀಗಾದಲ್ಲಿ ಪರಿಸರವು ತನ್ನ ಸಂಕಷ್ಟಗಳನ್ನು ಯಾರೊಂದಿಗೆ ಹೇಳಿಕೊಳ್ಳಬೇಕು. ಪರಿಸರಕ್ಕೆ ತೊಂದರೆ ಕೊಡದಂತೆ ಬದುಕಬೇಕು. ಜೊತೆಗೆ ಹೊಂದಿಕೊಂಡು ಬಾಳಬೇಕು ಎಂದು ನಮ್ಮ ಅನೇಕ ಚಿಂತಕರು ಪ್ರತಿಪಾದಿಸಿದ್ದಾರೆ. ಆದರೆ ಈ ಮಾತು ನಮ್ಮ ಯಾರ ಕಿವಿಗೂ ಬೀಳದಿರುವುದರಿಂದ ನಾವೆಲ್ಲರೂ ಒಂದಲ್ಲ ಒಂದು ರೀತಿ ಪರಿಸರ ನಾಶಕ್ಕೆ ಕಾರಣಕರ್ತರಾಗುತ್ತಿದ್ದೇವೆ. ಹೀಗೆ ಆದಲ್ಲಿ ಮುಂದಿನ ಪೀಳಿಗೆಗೆ ನಾವು ಯಾವುದನ್ನು ಉಳಿಸಿ ಹೋಗುತ್ತಿದ್ದೇವೆ ಎನ್ನುವುದನ್ನು ಅವರೂ ಪ್ರಶ್ನೆ ಮಾಡುತ್ತಿರುವುದರಲ್ಲಿ ಅರ್ಥವೂ ಇದೆ.

ಪ್ರತಿ ವರ್ಷವೂ ವಿಶ್ವದ ಬಹುತೇಕ ರಾಷ್ಟ್ರಗಳು ಒಂದೆಡೆ ಸೇರಿ ಪರಿಸರ ಕುರಿತಾಗಿ ಚರ್ಚೆಗಳನ್ನು ಮಾಡುತ್ತವೆ. ಎಲ್ಲರೂ ಒಂದಾಗಿ ನಾನಾ ಬಗೆಯ ಪರಿಸರ ಕಾಳಜಿಯ ಪ್ಯಾರೀಸ್, ಜಿನೇವಾ. . . . . ಒಪ್ಪಂದಗಳನ್ನು ಮಾಡಿಕೊಳ್ಳುತ್ತಾರೆ. ಆದರೆ ಒಂದು ಒಪ್ಪಂದವೂ ಸಮರ್ಪಕವಾಗಿ ಇಂದಿಗೂ ಜಾರಿಗೆ ಬಂದಿಲ್ಲ. ಯಾವ ರಾಷ್ಟ್ರಗಳು ಬದಲಾದಂತೆ ಕಾಣುತ್ತಿಲ್ಲ. ಅವರೇ ಹಾಕಿಕೊಂಡ ಗುರಿಯನ್ನು ಮುಟ್ಟಲು ಆಗುತ್ತಿಲ್ಲ. ಇದು ಪರಿಸರದ ಬಗ್ಗೆ ನಮ್ಮ ನಾಯಕರುಗಳಿಗಿರುವ ಕಾಳಜಿಯನ್ನು ತೋರಿಸುತ್ತದೆ. ಪರಿಸರವನ್ನು ತಮಗೆ ಬೇಕಾದಂತೆ ಬೇಕಾಬಿಟ್ಟಿಯಾಗಿ ಬಳಸಿಕೊಂಡು, ಸಂರಕ್ಷಣೆ ಅಥವಾ ಪರಿಸರ ಪ್ರಜ್ಞೆ ಕಾಳಜಿಯನ್ನು ನಿರ್ಲಕ್ಷಿಸಿರುವುದು ವಿಪರ್ಯಾಸ. ಜೊತೆಗೆ ಅದನ್ನ ಚಿಕ್ಕವರ ತಲೆಗೆ ಕಟ್ಟುತ್ತಿದ್ದಾರೆ. ಪರಿಸರದ ಉಳಿಸುವುದು ತಮ್ಮದಲ್ಲ ಎನ್ನುವ ರೀತಿಯಲ್ಲಿ ಹಿರಿಯರ ವರ್ತನೆಗಳು ನಿಜವಾಗಲೂ ಕೂಡ ಸೋಜಿಗವನ್ನು ಉಂಟುಮಾಡುತ್ತವೆ. ಬಹಳ ಮುಖ್ಯವಾಗಿ ದೊಡ್ಡವರು ಈ ನೈತಿಕ ಹೊಣೆಯಿಂದ ನುಣುಚಿಕೊಳ್ಳಬಾರದು. ಇಲ್ಲದಿರೆ ಮುಂದಿನ ದಿನಗಳು ಮತ್ತು ಮುಂದಿನ ಪೀಳಿಗೆ ಎಂದಿಗೂ ನಮ್ಮನ್ನು ಕ್ಷಮಿಸುವುದಿಲ್ಲ.

ಪರಿಸರದಲ್ಲಿ ಇರುವ ಇತರ ಜೀವಿಗಳಂತೆ ಮನುಷ್ಯನು ಕೂಡ ಒಂದು ಪ್ರಾಣಿ ಅಷ್ಟೇ. ಆದರೆ ಈ ಮಾನವ ಪ್ರಾಣಿ ತನ್ನ ದುರಾಸೆಗೆ ಪರಿಸರವನ್ನು ಬಳಸಿಕೊಳ್ಳುತ್ತಿದ್ದಾನೆ. ಇಂದು ಪರಿಸರ ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ನಾಶವಾಗುತ್ತಿದ್ದರೆ ಎಲ್ಲರೂ ಕೂಡ ಅದರ ಬಗ್ಗೆ ಗಂಭೀರವಾಗಿ ಚರ್ಚೆ ಮಾಡಬೇಕಾಗಿತ್ತು. ಮಾಧ್ಯಮಗಳಲ್ಲಿ ಅತ್ಯಂತ ಮುಖ್ಯವಾದ ಚರ್ಚೆ ಇದು ಆಗಬೇಕಿತ್ತು. ಅಲ್ಲಿ ಪ್ರತಿ ದಿನ ಪರಿಸರದ ಬಗ್ಗೆ ಚಿಂತನ–ಮಂಥನಗಳು ನಡೆಯಬೇಕಿತ್ತು. ಆದರೆ ಯಾರೊಬ್ಬರೂ ಅದರ ಬಗ್ಗೆ ಚಕಾರ ಎತ್ತದಿರುವುದು ಅಚ್ಚರಿಯ ಸಂಗತಿ. ಪರಿಸರವನ್ನು ಇದೇ ರೀತಿ ನಾವು ನಾಶಮಾಡುತ್ತಾ ಸಾಗಿದರೆ ಮುಂದಿನ ಹನ್ನೆರಡು ವರ್ಷಗಳಲ್ಲಿ ಬದುಕು ತುಂಬಾ ಸಂಕಷ್ಟಕ್ಕೆ ಒಳಗಾಗುವುದರಲ್ಲಿ ಅನುಮಾನವೇ ಇಲ್ಲ. ಸಂದಿಗ್ಧ ಸಮಯದಲ್ಲಿ ಮಾನವ ಸಂಕುಲ ಉಳಿಯಬೇಕು ಅನ್ನುವುದಾದರೆ, ಅದನ್ನ ಸರಿಪಡಿಸಿಕೊಳ್ಳಲು ಈಗಲೂ ಸಾಧ್ಯವಿದೆ. ಅದು ನಮ್ಮ ಕೈಯಲ್ಲಿಯೇ ಇದೆ. ತಪ್ಪುಗಳು ಎಲ್ಲಿ ಆಗಿವೆ ಎಂಬುದನ್ನು ಗುರುತಿಸಿಕೊಳ್ಳಬೇಕು. ಆಗಿದ್ದನ್ನು ಒಪ್ಪಿಕೊಳ್ಳಬೇಕು. ಆ ತಪ್ಪುಗಳನ್ನು ತಿದ್ದಿಕೊಂಡು ಮುಂದೆ ಸಾಗಬೇಕು. ಇಲ್ಲದೇ ಹೋದರೆ ಮುಂದಿನ ಕೆಲವೇ ವರ್ಷಗಳಲ್ಲಿ ಮಾನವನ ಜೊತೆ ಯಾವ ಜೀವಿಯೂ ಈ ಭೂಮಿ ಮೇಲೆ ಬದುಕುಳಿಯಲಾರದು. ಇಂತಹ ಮಹತ್ತರ ಅಂಶಗಳನ್ನು ಈಗಲೇ ಮಕ್ಕಳ ಗಮನಕ್ಕೆ ತಂದು ಅವರಲ್ಲಿ ಪರಿಸರ ಕಾಳಜಿ ಮುಡಿಸುವುದು ಇಂದಿನ ಆದ್ಯ ಕರ್ತವ್ಯವಾಗಿದೆ.



# ಗವಿಸಿದ್ಧೇಶ್ವರ ಜಾತ್ರಾ ಮಹೋತ್ಸವ ಕಾರ್ಯಕ್ರಮ

**ಹಂಪಿ ಟೈಮ್ಸ್ ಕೊಪ್ಪಳ**

ಶ್ರೀ ಗವಿಸಿದ್ದೇಶ್ವರ ಜಾತ್ರಾ ಮಹೋತ್ಸವ–2024ರ ಅಂಗವಾಗಿ ಜನವರಿ 21ರಿಂದ 29ರ ವರೆಗೆ ನಾನಾ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

**ವಿಶೇಷ ಚೇತನರ ಉಚಿತ ಸಾಮೂಹಿಕ ವಿವಾಹ:** ಗವಿಸಿದ್ದೇಶ್ವರ ಜಾತ್ರಾ ಮಹೋತ್ಸವ ಪ್ರಯುಕ್ತ ಗವಿಸಿದ್ದೇಶ್ವರ ಮಠ ಹಾಗೂ ಬೆಂಗಳೂರಿನ ಸೆಲ್ಕೊ ಫೌಂಡೇಶನ್ ವತಿಯಿಂದ ವಿಶೇಷ ಚೇತನರ ಉಚಿತ ಸಾಮೂಹಿಕ ವಿವಾಹ ಕಾರ್ಯಕ್ರಮ ಜ.21ರಂದು ಬೆಳಿಗ್ಗೆ 11ಕ್ಕೆ ಶ್ರೀ ಗವಿಮಠ ಯಾತ್ರಿ ನಿವಾಸ ಆವರಣದ ಶಾಂತವನದಲ್ಲಿ ಹಮ್ಮಿಕೊಳ್ಳಲಾಗಿದ್ದು, ರಾಜ್ಯ ಹಾಗೂ ರಾಷ್ಟ್ರ ಪ್ರಶಸ್ತಿ ಪುರಸ್ಕೃತರಾದ ಬಾಗಲಕೋಟೆಯ ಘನಶ್ಯಾಮ ಬಾಂಡಗೆ ಅವರು ಅತಿಥಿಗಳಾಗಿ ಆಗಮಿಸುವರು.

ಜ.23ರಂದು ಸಂಜೆ 5 ಗಂಟೆಗೆ ಬಸವ ಪಟ ಹಾಗೂ ಶ್ರೀ ಅನ್ನಪೂರ್ಣೇಶ್ವರಿ ದೇವಿಗೆ ಉಡಿತುಂಬುವ ಕಾರ್ಯಕ್ರಮ ನಡೆಯಲಿದೆ.

**ಜ.24ರಂದು ಕಾಯಕ ದೇವೋಭವ–ಜಾಗೃತಿ ಅಭಿಯಾನ, ತೆಪ್ಪೋತ್ಸವ:** ಜಾತ್ರೆಯ ನಿಮಿತ್ತ ಕೊಪ್ಪಳ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಸಾರ್ವಜನಿಕ ಶಿಕ್ಷಣ ಇಲಾಖೆ, ಜಿಲ್ಲಾ ಕೌಶಲ್ಯಾಭಿವೃದ್ಧಿ ಇಲಾಖೆ, ಭಾರತೀಯ ರೆಡ್‌ಕ್ರಾಸ್ ಸಂಸ್ಥೆ ಹಾಗೂ ಸ್ಥಳೀಯ ಶಿಕ್ಷಣ ಸಂಸ್ಥೆಗಳ ಸಹಯೋಗದೊಂದಿಗೆ ಕಾಯಕ ಸ್ವಾವಲಂಬಿ ಬದುಕು, ಸಮೃದ್ಧ ಬದುಕು, ಸಂತೋಷದ ಬದುಕು ಎಂಬ ಘೋಷ ವಾಕ್ಯದೊಂದಿಗೆ "ಕಾಯಕ ದೇವೋಭವ–ಜಾಗೃತಿ ಅಭಿಯಾನ" ಕಾರ್ಯಕ್ರಮವನ್ನು ಜ.24ರಂದು ಬೆಳಿಗ್ಗೆ 8.30 ಗಂಟೆಗೆ ನಗರದ ಬಾಲಕೀಯರ ಸರಕಾರಿ ಪದವಿ ಪೂರ್ವ ಕಾಲೇಜು ಮೈದಾನ (ಪಬ್ಲಿಕ್ ಗ್ರೌಂಡ್)ದಿಂದ ಅಶೋಕ ವೃತ್ತ, ಗಡಿಯಾರ ಕಂಬದ ಮೂಲಕ ಗವಿಮಠದ ವರೆಗೆ ಹಮ್ಮಿಕೊಳ್ಳಲಾಗಿದೆ. ಅಂದು ಸಂಜೆ 5 ಗಂಟೆಗೆ ಶ್ರೀಮಠದ ಕೆರೆಯಲ್ಲಿ ತೆಪ್ಪೋತ್ಸವ ಹಾಗೂ ಧಾರವಾಡದ ಅಯ್ಯಪ್ಪಯ್ಯ ಹಲಗಲಿಮಠ ಹಾಗೂ ಸಂಗಡಿಗರಿಂದ ಸಂಗೀತ ಕಾರ್ಯಕ್ರಮ ನಡೆಯಲಿದೆ.

**ಪಲ್ಲಕ್ಕಿ, ಲಘು ರಥೋತ್ಸವ:** ಜ.25ರಂದು ಸಂಜೆ 4ಗಂಟೆಗೆ ಜಂಗಮೋತ್ಸವ (ಪಲ್ಲಕ್ಕಿ ಉತ್ಸವ), ಶ್ರೀ ಗವಿಸಿದ್ದೇಶ್ವರ ಮೂರ್ತಿಯ ಕಳಸದ ವಿವಿಧ ಜನಪದ ಕಲಾತಂಡಗಳೊಂದಿಗೆ ಮೆರವಣಿಗೆ ನಡೆಯಲಿದೆ.

ಜ.26ರಂದು ಸಂಜೆ 5 ಗಂಟೆಗೆ ಉಚ್ಛಾಯ (ಲಘು ರಥೋತ್ಸವ), 6ಗಂಟೆಗೆ ಕೈಲಾಸ ಮಂಟಪದಲ್ಲಿ ಸಂಸ್ಥಾನ ಶ್ರೀಗವಿಮಠದ ಗವಿಸಿದ್ದೇಶ್ವರ ಸಂಗೀತ ವಿದ್ಯಾಪೀಠದ ವಿದ್ಯಾರ್ಥಿಗಳಿಂದ ಸಂಗೀತ ಕಾರ್ಯಕ್ರಮ ಜರುಗಲಿದೆ.

**ಪೊಲೀಸ್ ಶ್ವಾನಗಳ ಸಾಹಸ ಪ್ರದರ್ಶನ, ವಿವಿಧ ಕಾರ್ಯಕ್ರಮ ಜ.27ಕ್ಕೆ:** ಶ್ರೀ ಗವಿಸಿದ್ದೇಶ್ವರ ಜಾತ್ರಾ ಮಹೋತ್ಸವ ನಿಮಿತ್ತ ಜ.27ರಂದು ಬೆಳಿಗ್ಗೆ 11ಕ್ಕೆ ಶ್ರೀಮಠದ ಆವರಣದಲ್ಲಿ ಕೊಪ್ಪಳ ಜಿಲ್ಲಾ ಪೊಲೀಸ್ ವತಿಯಿಂದ ಪೊಲೀಸ್ ಶ್ವಾನಗಳ ಸಾಹಸ ಪ್ರದರ್ಶನ,



ಭೂಮಿ ಕರಾಟೆ ಫೌಂಡೇಶನ್ ಕೊಪ್ಪಳ ತಂಡದಿಂದ ಕರಾಟೆ ಪ್ರದರ್ಶನ ಮತ್ತು ದಾಲ್‌ಪಟ ಪ್ರದರ್ಶನ ಏರ್ಪಡಿಸಲಾಗಿದೆ.

**ಜ.27ರಂದು ಮಹಾರಥೋತ್ಸವ:** ಶ್ರೀ ಗವಿಸಿದ್ದೇಶ್ವರ ಮಹಾರಥೋತ್ಸವವು ಜನವರಿ 27ರಂದು ಸಂಜೆ 5.30ಕ್ಕೆ ನಡೆಯಲಿದ್ದು, ಮೈಸೂರಿನ ಸುತ್ತೂರು ಕ್ಷೇತ್ರದ ಜಗದ್ಗುರು ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠದ ವೀರಸಿಂಹಾಸನ ಜಗದ್ಗುರು 1008 ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು ಮಹಾರಥೋತ್ಸವಕ್ಕೆ ಚಾಲನೆ ನೀಡುವರು.

**ಉದ್ಘಾಟನಾ ಸಮಾರಂಭ:** ಶ್ರೀ ಗವಿಸಿದ್ದೇಶ್ವರ ಜಾತ್ರಾ ಮಹೋತ್ಸವದ ಉದ್ಘಾಟನಾ ಸಮಾರಂಭವು ಜ.27ರಂದು ಸಂಜೆ 6 ಗಂಟೆಗೆ ಕೈಲಾಸ ಮಂಟಪದಲ್ಲಿ ಹಮ್ಮಿಕೊಳ್ಳಲಾಗಿದ್ದು, ಜಮಖಂಡಿಯ ಓಲೇಮಠದ ಡಾ ಅಭಿನವ ಕುಮಾರ ಚನ್ನಬಸವ ಮಹಾಸ್ವಾಮಿಗಳು ಹಾಗೂ ಹಿರೇಸಿಂಧೋಗಿಯ ಕಪ್ಪತ್ತೇಶ್ವರ ಮಠದ ಚಿದಾನಂದ ಮಹಾಸ್ವಾಮಿಗಳು ಸಾನಿಧ್ಯ ವಹಿಸುವರು. ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ವಿಶ್ವಸಂಸ್ಥೆಯ ಯುನೆಸ್ಕೋ (ಪ್ಯಾರಿಸ್)ಗೆ ಭಾರತ ಮಾಜಿ ರಾಯಭಾರಿಗಳಾದ ಚಿರಂಜೀವಿ ಸಿಂಘ್, ಇಸ್ರೋದ ಚಂದ್ರಯಾನ–3ರ ಯೋಜನಾ ನಿರ್ದೇಶಕರು ಹಾಗೂ ಖ್ಯಾತ ಖಗೋಳ ವಿಜ್ಞಾನಿಗಳಾದ ಪಿ.ವೀರಮುತ್ತುವೇಲ್ ಮತ್ತು ಬೆಂಗಳೂರಿನ ಅದಮ್ಯ ಚೇತನ ಫೌಂಡೇಶನ್ ಅಧ್ಯಕ್ಷರು ಹಾಗೂ ಸಹಸಂಸ್ಥಾಪಕರಾದ ತೇಜಸ್ವಿನಿ ಅನಂತಕುಮಾರ್ ಅವರು ಪಾಲ್ಗೊಳ್ಳುವರು.

ಬೆಂಗಳೂರಿನ ಪಂಡಿತ್ ಬಸವಕುಮಾರ ಮರದೂರು ಹಾಗೂ ಹುಬ್ಬಳ್ಳಿಯ ಪಂಡಿತ್ ಕೃಷ್ಣೇಂದ್ರ ವಾಡೇಕರ್ ಹಾಗೂ ಸಂಗಡಿಗರಿಂದ ಸ್ವರಸಂಘಮ ಸಂಗೀತ ಕಾರ್ಯಕ್ರಮ ನಡೆಯಲಿದೆ. ಅಂದು ರಾತ್ರಿ 9.30ಕ್ಕೆ ಗವಿಮಠದ ಜಾತ್ರಾ ಮೈದಾನದಲ್ಲಿ ಲೇಸರ್ ಶೋ ಏರ್ಪಡಿಸಲಾಗಿದೆ.

**ಜ.27ರಿಂದ ಅನ್ವೇಷಣೆ (ಆತ್ಮಚಿಂತನ):** ಶ್ರೀ ಗವಿಸಿದ್ದೇಶ್ವರ ಜಾತ್ರಾ ಮಹೋತ್ಸವ ಅಂಗವಾಗಿ ಬೆನಕನಹಳ್ಳಿಯ ದೇವಾನಂದ ಶರಣರು ಮತ್ತು ಕಜ್ಜಿಡೋಣಿಯ ಕೃಷ್ಣಾನಂದ ಶಾಸ್ತ್ರೀಗಳಿಂದ ಅನ್ವೇಷಣೆ (ಆತ್ಮಚಿಂತನ) ಕಾರ್ಯಕ್ರಮವನ್ನು ಜನವರಿ 27 ರಿಂದ 29ರ ವರೆಗೆ ಬೆಳಗ್ಗೆ 11 ರಿಂದ 1.30 ಗಂಟೆಯ ವರೆಗೆ ಶ್ರೀಮಠದ ಯಾತ್ರಿ ನಿವಾಸ ರಸ್ತೆಯ ಶಾಂತವನದಲ್ಲಿ ನಡೆಯಲಿದೆ.

**ಜ.27, 28ರಂದು ನಾಟಕ ಪ್ರದರ್ಶನ:** ಜಾತ್ರಾ ಮಹೋತ್ಸವ ಅಂಗವಾಗಿ ಶ್ರೀ ಗವಿಸಿದ್ದೇಶ್ವರ ಸೇವಾ ನಾಟ್ಯ ಸಂಘ ಬಗನಾಳ ಇವರಿಂದ 'ಶ್ರೀ ಗವಿಸಿದ್ದೇಶ್ವರ ಮಹಾತ್ಮೆ' ನಾಟಕ ಪ್ರದರ್ಶನವು ಜನವರಿ 27 ಮತ್ತು 28ರಂದು ಎರಡು ದಿನಗಳ ಕಾಲ ರಾತ್ರಿ 10.30ಕ್ಕೆ ಶ್ರೀ ಶಾಂತವೀರ ಪಬ್ಲಿಕ್ ಸ್ಕೂಲ್ ಮುಂಭಾಗದ ಪಾದಗಟ್ಟಿ ಹತ್ತಿರ ನಡೆಯಲಿದೆ.

**ಜ.28ರಂದು ಕುಸ್ತಿ ಪಂದ್ಯಾವಳಿ, ವಿವಿಧ ಕಾರ್ಯಕ್ರಮ:** ಜಾತ್ರಾ ಮಹೋತ್ಸವ ಪ್ರಯುಕ್ತ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಸಹಯೋಗದಲ್ಲಿ ಆಹ್ವಾನಿತ ಮಹಿಳಾ ಮತ್ತು ಪುರುಷರ ತಂಡಗಳಿಂದ ಕುಸ್ತಿ ಪಂದ್ಯಾವಳಿಗಳನ್ನು ಜನವರಿ 28ರಂದು ಬೆಳಿಗ್ಗೆ 10 ಗಂಟೆಗೆ ನಗರದ ಶ್ರೀ ಗವಿಮಠದ ಆವರಣದಲ್ಲಿ ಏರ್ಪಡಿಸಲಾಗಿದೆ.

ಅಂದು ಸಂಜೆ 4 ಗಂಟೆಗೆ ಶ್ರೀ ಶಿವಶಾಂತ ಶರಣರ ದೀರ್ಘದಂಡ ನಮಸ್ಕಾರ ಹಾಗೂ ಸಿದ್ದೇಶ್ವರ ಮೂರ್ತಿಯ ಮೆರವಣಿಗೆ ನಡೆಯಲಿದೆ ಹಾಗೂ ರಾತ್ರಿ 10ಕ್ಕೆ ಮದ್ದು ಸುಡುವ ಕಾರ್ಯಕ್ರಮ ಜರುಗಲಿದೆ.

**ಭಕ್ತ ಹಿತಚಿಂತನ ಸಭೆ ಜ.28ಕ್ಕೆ:** ಗವಿಸಿದ್ದೇಶ್ವರ ಜಾತ್ರೆಯ ನಿಮಿತ್ತ ಭಕ್ತ ಹಿತಚಿಂತನ ಸಭೆಯನ್ನು ಜ28 ರಂದು ಸಾಯಂಕಾಲ 5.30 ಗಂಟೆಗೆ ಶ್ರೀ ಗವಿಮಠದ ಕೈಲಾಸ ಮಂಟಪದಲ್ಲಿ ಆಯೋಜಿಸಲಾಗಿದೆ. ಮುದ್ದೇನಹಳ್ಳಿ ಆಶ್ರಮದ ಸಾಮಾಜಿಕ ಮತ್ತು ಆಧ್ಯಾತ್ಮಿಕ ಗುರುಗಳಾದ ಮಧುಸೂದನ ಸಾಯಿಯವರು ಹಾಗೂ ಕುಷ್ಟಗಿ–ನಿಡಸೇಸಿಯವರಾದ ಅಭಿನವ ಕರಿಬಸವ ಶಿವಾಚಾರ್ಯ ಮಹಾಸ್ವಾಮಿಗಳು ಸಾನಿಧ್ಯ ವಹಿಸುವರು. ಸಿದ್ಧಾಪುರ ಶಿರಳಗಿಯ ಶ್ರೀ ಚೈತನ್ಯ ರಾಜಾರಾಮ ಆಶ್ರಮದ ಬ್ರಹ್ಮಾನಂದ ಭಾರತೀ ಮಹಾಸ್ವಾಮಿಗಳು ಉಪದೇಶಾಮೃತ ನೀಡುವರು.

ಈ ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಪದ್ಮಶ್ರೀ ಪ್ರಶಸ್ತಿ ಪುರಸ್ಕೃತ ಗಣ್ಯರಾದ ಮಿಲ್ಲೆಟ್ ಮ್ಯಾನ್ ಆಫ್ ಇಂಡಿಯಾ, ಮೈಸೂರಿನ ಆಹಾರ ವಿಜ್ಞಾನದ ಸಂತ ಡಾ.ಖಾದರ್ ವಲಿ ದೂದೇಕುಲ ಹಾಗೂ ಅಹಮದ್‌ನಗರದ ಹೀವರೆ ಬಜಾರ ಗ್ರಾಮ ಪಂಚಾಯತ್ ಸರಪಂಚ ಪೋಪಟ್ ರಾವ್ ಪವಾರ್ ಅವರು ಪಾಲ್ಗೊಳ್ಳಲಿದ್ದಾರೆ. ಮುಂಬೈನ ಅನುರಾಧಾ ಪಾಲ್ ಹಾಗೂ ತಂಡದವರಿಂದ ಸ್ತ್ರೀ ಶಕ್ತಿ ವಾದ್ಯ ಸಂಗೀತ ಕಾರ್ಯಕ್ರಮ ಹಾಗೂ ಧಾರವಾಡದ ಬಸವರಾಜ ವಂದಲಿ ಹಾಗೂ ಸಂಗಡಿಗರಿಂದ ಸ್ವರ ಮಂದಾರ ಸುಗಮ ಸಂಗೀತ ಕಾರ್ಯಕ್ರಮ ನೆಡೆಯಲಿವೆ ಎಂದು ಪ್ರಕಟಣೆ ತಿಳಿಸಿದೆ.

**ಕಬಡ್ಡಿ ಪಂದ್ಯಾವಳಿಗಳು ಜ.29ಕ್ಕೆ:** ಶ್ರೀ ಗವಿಸಿದ್ದೇಶ್ವರ ಜಾತ್ರಾ ಮಹೋತ್ಸವದ ಪ್ರಯುಕ್ತ ಆಹ್ವಾನಿತ ಮಹಿಳಾ ಮತ್ತು ಪುರುಷರ ತಂಡಗಳಿಂದ ಕಬಡ್ಡಿ ಪಂದ್ಯಾವಳಿಗಳನ್ನು ಜನವರಿ 29ರಂದು ಬೆಳಿಗ್ಗೆ 10 ಗಂಟೆಗೆ ನಗರದ ಶ್ರೀ ಗವಿ ಮಠದ ಆವರಣದಲ್ಲಿ ಏರ್ಪಡಿಸಲಾಗಿದೆ.

**ಜ.29ರಂದು ಸಮಾರೋಪ ಸಮಾರಂಭ:** ಜಾತ್ರಾ ಮಹೋತ್ಸವದ ಸಮಾರೋಪ ಸಮಾರಂಭವು ಜನವರಿ 29ರಂದು ಸಾಯಂಕಾಲ 5.30 ಗಂಟೆಗೆ ಗವಿಮಠದ ಕೈಲಾಸ ಮಂಟಪದಲ್ಲಿ ಹಮ್ಮಿಕೊಳ್ಳಲಾಗಿದ್ದು, ಶಿವಗಂಗಾಕ್ಷೇತ್ರದ ಮೇಲಣಗವಿ ವೀರಸಿಂಹಾಸನ ಸಂಸ್ಥಾನ ಮಠದ ಮಹಾಸ್ವಾಮಿಗಳಾದ ಮಲಯಾ ಶಾಂತಮುನಿ ದೇಶಿಕೇಂದ್ರ ಶಿವಾಚಾರ್ಯ ಮಹಾಸ್ವಾಮಿಗಳು ಸಾನಿಧ್ಯ ವಹಿಸುವರು. ಮುಖ್ಯ ಅತಿಥಿಗಳಾಗಿ ಮೈಸೂರಿನ ವಿಶ್ವ ವಿಖ್ಯಾತ ಪರಿಸರ ಮತ್ತು ವನ್ಯಜೀವಿ ಛಾಯಾಗ್ರಾಹಕ ಹಾಗೂ ಗ್ರೀನ್ ಆಸ್ಕರ್ ಪ್ರಶಸ್ತಿ ಪುರಸ್ಕೃತರಾದ ಕೃಪಾಕರ ಸೇನಾನಿ ಅವರು ವಹಿಸುವರು.

ಬೆಂಗಳೂರಿನ ಖ್ಯಾತ ಕನ್ನಡ ಚಲನಚಿತ್ರ ಕಲಾವಿದರಾದ ದೊಡ್ಡಣ್ಣ ಅವರು ಸಮಾರೋಪ ನುಡಿಗಳನ್ನು ಆಡುವರು. ಉಡುಪಿ ಕಲರ್ಸ್ ಕನ್ನಡ ಖ್ಯಾತಿಯ ಕಲಾಸಿಂಧು ಕಲಾವತಿ ದಯಾನಂದ ಬಳಗದಿಂದ ಸ್ವರ–ಚಿತ್ತಾರ ಸಂಗೀತ ಕಾರ್ಯಕ್ರಮ ಮತ್ತು ಗಂಗಾವತಿಯ ಬಿ.ಪ್ರಾಣೇಶ ಅವರಿಂದ ಹಾಸ್ಯೋತ್ಸವ ಕಾರ್ಯಕ್ರಮ ಜರುಗಲಿದೆ.

**ವಿಶೇಷ ಆಕರ್ಷಣೆಗಳು:** ಜಾತ್ರೆಯಲ್ಲಿ ಕೌಶಲ್ಯಾಭಿವೃದ್ಧಿ ಇಲಾಖೆಯಿಂದ ಕರ–ಕುಶಲ ವಸ್ತುಗಳ ಪ್ರದರ್ಶನ ಹಾಗೂ ಮಾರಾಟ ಮೇಳಿಗೆ, ಕೃಷಿ ಮೇಳ, ತಾರಸಿ ತೋಟ (ಟೆರೇಸ್ ಗಾರ್ಡನ್), ಫಲ–ಪುಷ್ಪ ಪ್ರದರ್ಶನ, ರಕ್ತದಾನ, ರಂಗೋಲಿ ಪ್ರರ್ದಶನ ಸೇರಿದಂತೆ ವಿವಿಧ ಕಾರ್ಯಕ್ರಮಗಳು ನಡೆಯಲಿವೆ.

# ಸಮಾನಾಂತರ ಜಲಾಶಯ ನಿರ್ಮಾಣ

**ಹಂಪಿ ಟೈಮ್ಸ್ ಕೊಪ್ಪಳ**

ವಿಜಯನಗರ ಕಾಲುವೆ ಒಳಗೊಂಡಂತೆ ರಾಯಚೂರು, ಕೊಪ್ಪಳ, ಬಳ್ಳಾರಿ ಹಾಗೂ ವಿಜಯನಗರ ಜಿಲ್ಲೆಗಳಿಗೆ ಕುಡಿಯುವ ನೀರಿಗೆ ಸೇರಿದಂತೆ ಬೆಳೆದು ನಿಂತ ಬೆಳೆಗಳಿಗೆ ನೀರು ಹರಿಸಲು ತೀರ್ಮಾನ ಕೈಗೊಳ್ಳಲಾಗಿದೆ ಎಂದು ನೀರಾವರಿ ಸಲಹಾ ಸಮಿತಿ ಅಧ್ಯಕ್ಷರು ಆಗಿರುವ ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವರು ಮತ್ತು ಕೊಪ್ಪಳ ಜಿಲ್ಲಾ ಉಸ್ತುವಾರಿ ಸಚಿವರಾದ ಶಿವರಾಜ್ ಎಸ್. ತಂಗಡಗಿ ಅವರು ಹೇಳಿದರು.

ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ ಜನವರಿ 19ರಂದು ನಡೆದ ತುಂಗಭದ್ರಾ ನೀರಾವರಿ ಸಲಹಾ ಸಮಿತಿ ಸಭೆ ಬಳಿಕ ಸುದ್ದಿಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಅವರು, ಜಲಾಶಯದ ನೀರಿನ ಸಾಮರ್ಥ್ಯ 10.151 ಟಿಎಂಸಿ ಇದ್ದು ಈ ಪೈಕಿ ರಾಜ್ಯದ ಪಾಲು 2.481 ಟಿಎಂಸಿ, ಆಂಧ್ರಪ್ರದೇಶದ ಪಾಲು 2.851 ಡಿಎಂಸಿ ಇದೆ. ಈ ಹಿನ್ನೆಲೆಯಲ್ಲಿ ಜಲಾಶಯದಲ್ಲಿನ ನೀರಿನ ಲಭ್ಯತೆ ಆಧಾರಿಸಿ ನಾಲ್ಕು ಜಿಲ್ಲೆಗಳಿಗೆ ಕುಡಿಯುವ ನೀರು ಹಂಚಿಕೆ ಮಾಡಲಾಗಿದೆ.



ತುಂಗಭದ್ರಾ ಎಡದಂಡೆ ಮುಖ್ಯಕಾಲುವೆಗೆ, ತುಂಗಭದ್ರಾ ಎಡದಂಡೆ ಮುಖ್ಯ ಕಾಲುವೆಗೆ ಹಾಗೂ ರಾಯ ಬಸವಣ್ಣ ಕಾಲುವೆಗೆ ನೀರು ಒದಗಿಸಲು ಕಾಲಾವಧಿ ನಿಗದಿಪಡಿಸಲಾಗಿದೆ. ಉಳಿದಂತೆ ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವರಿಂದ ನೀರಿಗೆ ಬೇಡಿಕೆ ಇಟ್ಟಂತೆ ಕುಡಿಯಲು ನೀರು ಹರಿಸಲಾಗುವುದು. ಎರಡನೇ ಬೆಳೆಗೆ ನೀರು ನೀಡಲು ಸಾಧ್ಯವೇ ಇಲ್ಲ ಎಂಬುದನ್ನು ಹೇಳಲಾಗಿದೆ. ನಿಂತ ಬೆಳೆಗೆ ನೀರು ಬಿಡಲು ನಿರ್ಧಾರ ಕೈಗೊಳ್ಳಲಾಗಿದೆ ಎಂದು ತಿಳಿಸಿದರು.

ಹೂಳೆತ್ತುವ ವಿಚಾರದ ಬಗ್ಗೆ ಮಾಧ್ಯಮಗಳ ಪ್ರಶ್ನೆಗೆ ಪ್ರತಿಕ್ರಿಯಿಸಿದ ಸಚಿವರು, ಹೂಳೆತ್ತಲು ಸಾಧ್ಯವಿಲ್ಲ ಎಂದು ಈ ಹಿಂದೆಯೇ ತಾಂತ್ರಿಕ ಸಮಿತಿ ವರದಿ ನೀಡಿದೆ. ಹಾಗಾಗಿ ಸಮಾನಾಂತರ ಜಲಾಶಯ ನಿರ್ಮಿಸಬೇಕು ಎಂಬುದು ನಮ್ಮ ಬೇಡಿಕೆಯಾಗಿದೆ. ಇದಕ್ಕೆ ನೆರೆಯ ಆಂಧ್ರಪ್ರದೇಶ ಹಾಗೂ ತೆಲಂಗಾಣ ರಾಜ್ಯ ಕೂಡ ಒಪ್ಪಿಗೆ ನೀಡಬೇಕು. ಸಮಾನಾಂತರ ಜಲಾಶಯ ನಿರ್ಮಾಣ ಮಾಡುವ ವಿಚಾರದ ಬಗ್ಗೆ ಮುಖ್ಯಮಂತ್ರಿ ಹಾಗೂ ಉಪ ಮುಖ್ಯಮಂತ್ರಿಗಳ ಗಮನ ಸೆಳೆಯಲಾಗುವುದು ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಸಚಿವರಾದ ಜಮೀರ್ ಅಹಮದ್ ಖಾನ್, ಎನ್.ಎಸ್.ಬೋಸ್‌ರಾಜ್, ಶಾಸಕರಾದ ರಾಘವೇಂದ್ರ ಹಿಟ್ನಾಳ್, ಎಚ್. ಆರ್.ಗವಿಯಪ್ಪ, ಜಿ.ಜನಾರ್ಧನ ರೆಡ್ಡಿ ಹಾಗೂ ರೈತ ಮುಖಂಡರು ಇನ್ನಿತರರು ಉಪಸ್ಥಿತರಿದ್ದರು.

# ಶಾಂತಿಯುತ ವಾತವರಣಕ್ಕೆ ಸಹಕರಿಸಿ

## ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ನಿಖಿಲ್.ಬಿ ಹೇಳಿಕೆ | ಜಿಲ್ಲೆಯಲ್ಲಿ ಶಾಂತಿಯುತಕ್ಕೆ ಸಾರ್ವಜನಿಕರು ಸಹಕರಿಸಬೇಕು

**ಹಂಪಿ ಟೈಮ್ಸ್ ರಾಯಚೂರು**

ಪೊಲೀಸ್ ಇಲಾಖೆ ಸಾರ್ವಜನಿಕರ ಸೇವೆಗಾಗಿ ಶ್ರಮಿಸುವ ಇಲಾಖೆಯಾಗಿದ್ದು, ಜಿಲ್ಲೆಯಲ್ಲಿ ಶಾಂತಿಯುತ ವಾತವರಣ ನಿರ್ಮಾಣ ವಾಗಬೇಕಾದರೆ ಸಾರ್ವಜನಿಕರ ಸಹಕಾರ ಅತ್ಯಗತ್ಯವಾದದ್ದು ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ನಿಖಿಲ್.ಬಿ ಅವರು ಹೇಳಿದರು.



ಅವರು ಶುಕ್ರವಾರ ನಗರದ ಪೊಲೀಸ್ ಕವಾಯತು ಮೈದಾನದಲ್ಲಿ ಹಮ್ಮಿಕೊಂಡಿದ್ದ ಡಿಫೆಕ್ಟಿವ್ ಸೈಲೆನ್ಸರ್‌ಗಳನ್ನು ನಾಶಪಡಿಸುವ ಮತ್ತು ಕಳೆದುಕೊಮಡ ಸ್ವತ್ತನ್ನು ಮರಳಿ ವಾರಸುದಾರರಿಗೆ ಹಿಂದಿರುಗಿಸುವ ಕಾರ್ಯಕ್ರಮವನ್ನುದ್ದೇಶಿಸಿ ಮಾತನಾಡಿದರು.

ಮನೆ ಕಳ್ಳತನ ಪ್ರಕರಣಕ್ಕೆ ಸಂಬಂಧಿಸಿದಂತೆ ಸಾರ್ವಜನಿಕರು ಹೆಚ್ಚಿನ ಜಾಗ್ರತರಾಗಬೇಕು. ತಮ್ಮ ಮನೆಯಿಂದ ಎಲ್ಲಿಯಾದರು ಹೋಗುವುದಾದರೇ ಅಂತಹ ಸಂದರ್ಭದಲ್ಲಿ ತಮ್ಮ ಸ್ಥಳೀಯ ಪೊಲೀಸ್ ಠಾಣೆ ಅಥವಾ 112ಗೆ ತಿಳಿಸಬೇಕು. ಆಗ ಪೊಲೀಸ್ ಇಲಾಖೆಯಿಂದ ಮನೆಯ ಬಾಗಲಿಗೆ ಚೀಟಿಯನ್ನು ಅಳವಡಿಸಲಾಗುತ್ತದೆ ಆ ಚೀಟಿಯಲ್ಲಿ ದಿನನಿತ್ಯ ಬೀಟ್‌ಗೆ ಬರುವ ಪೊಲಿಸ್ ಸಿಬ್ಬಂದಿ ನೀವು ಮನೆಗೆ ಹಿಂತಿರುಗುವ ವರೆಗೂ ಸಹಿ ಮಾಡುತ್ತಾರೆ ಇದರಿಂದ ನಿಮ್ಮ ಮನೆಯ ಕಾವಲು ಹೆಚ್ಚಿನ ಭದ್ರತೆಯಿಂದ ಕೂಡಿರುತ್ತದೆ. ಈ ನೂತನ ಪದ್ಧತಿಯನ್ನು ಜಿಲ್ಲೆಯಲ್ಲಿ ಅಳವಡಿಸಲಾಗುತ್ತಿದೆ ಎಂದರು.

ಮೊಬೈಲ್ ಫೋನ್‌ಗಳು ಕಳ್ಳತನವಾದಲ್ಲಿ ಸಿಇಐಆರ್ ಪೋರ್ಟಲ್‌ನಲ್ಲಿ ದೂರು ದಾಖಲಿಸಬೇಕು. ಆಗ ಪೊಲೀಸ್ ಇಲಾಖೆಯಿಂದ ತನಿಖೆ ಕೈಗೊಂಡು ಕಳೆದುಹೋದ ಮೊಬೈಲ್ ಫೋನ್‌ಗಳನ್ನು ಕಂಡುಹಿಡಿಯಬಹುದಾಗಿದೆ ಎಂದರು.

ಈ ಸಂದರ್ಭದಲ್ಲಿ ಹೆಚ್ಚುವರಿ ಪೊಲೀಸ್ ಅಧೀಕ್ಷಕರಾದ ಶಿವಕುಮಾರ, ಹರೀಶ ಸೇರಿದಂತೆ ಲಿಂಗಸುಗೂರು, ಸಿಂಧನೂರು ಹಾಗೂ ರಾಯಚೂರಿನ ಜಿಲ್ಲಾ ಪೊಲೀಸ್ ಉಪ ಅಧೀಕ್ಷಕರು, ವಿವಿಧ ಪೊಲೀಸ್ ಠಾಣೆಯ ಸಿಪಿಐ, ಪಿಎಸ್‌ಐ, ಅಧಿಕಾರಿಗಳು, ಸಿಬ್ಬಂದಿಗಳು, ಸಾರ್ವಜನಿಕರು ಉಪಸ್ಥಿತರಿದ್ದರು.

# ಸಕಾಲ ಕಾಯ್ದೆ ಅರಿವು ತರಬೇತಿ ಕಾರ್ಯಕ್ರಮ

**ಹಂಪಿ ಟೈಮ್ಸ್ ಕೊಪ್ಪಳ**

ಸಕಾಲದಲ್ಲಿ ಅರ್ಜಿ ಸಲ್ಲಿಸುವ ಬಗ್ಗೆ ಬಹಳಷ್ಟು ಸಾರ್ವಜನಿಕರಿಗೆ ಮಾಹಿತಿ ಇರುವುದಿಲ್ಲ. ಆದ್ದರಿಂದ ಇಲಾಖಾವಾರು ಕಾರ್ಯಕ್ರಮ, ಸಭೆಗಳಲ್ಲಿ ಸಾರ್ವಜನಿಕರಿಗೆ ಸಕಾಲ ಕಾಯ್ದೆ ಬಗ್ಗೆ ಜಾಗೃತಿ ಮೂಡಿಸಿ ಎಂದು ಅಪರ ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ಸಕಾಲ ಸಮನ್ವಯ ಸಮಿತಿಯ ಅಧ್ಯಕ್ಷರಾದ ಸಾವಿತ್ರಿ ಬಿ.ಕಡಿ ಅವರು ಅಧಿಕಾರಿಗಳಿಗೆ ಹೇಳಿದರು.

ಶುಕ್ರವಾರದಂದು ಜಿಲ್ಲಾ ಪಂಚಾಯತ್‌ನ ಜೆ.ಎಚ್.ಪಟೇಲ್ ಸಭಾಂಗಣದಲ್ಲಿ ಸಕಾಲ ಕಾಯ್ದೆಯ ಕುರಿತು ಹಾಗೂ ಸಕಾಲ ಕಾಯ್ದೆಯ ಅಡಿಯಲ್ಲಿ ಸಾರ್ವಜನಿಕರಿಗೆ ಒದಗಿಸಲಾದ ಹಕ್ಕುಗಳ ಹಾಗೂ ಸಕಾಲ ಕಾಯ್ದೆಯಡಿ ಅಧಿಸೂಚಿಸಲಾದ ಸೇವೆಗಳ ಕುರಿತಂತೆ ಸಾರ್ವಜನಿಕರಿಗೆ ಅರಿವು ಮೂಡಿಸುವ ಕುರಿತು ಸಕಾಲ ಅನುಷ್ಠಾನಾಧಿಕಾರಿಗಳು, ವಿಷಯ ನಿರ್ವಾಹಕರಿಗೆ ಆಯೋಜಿಸಲಾಗಿದ್ದ ಸಕಾಲ ಅರಿವು ತರಬೇತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಸಕಾಲ ಕಾಯ್ದೆಯ ಸಮರ್ಪಕ ಅನುಷ್ಠಾನ ಕುರಿತು ಅನುಷ್ಠಾನಾಧಿಕಾರಿಗಳಿಗೆ, ಇಲಾಖಾ ಅಧಿಕಾರಿಗಳಿಗೆ ಸೂಕ್ತ ತರಬೇತಿನ್ನು ನೀಡಲಾಗಿದೆ. ಅದರಂತೆ ಇಲಾಖಾ ಅಧಿಕಾರಿಗಳು ಸಕಾಲ ಅರ್ಜಿಗಳನ್ನು ವಿಲೇ ಮಾಡಲು ಕ್ರಮ ವಹಿಸಿದ್ದೀರಿ. ಆದರೆ ಇಂದಿಗೂ ಬಹುತೇಕ ಸಾರ್ವಜನಿಕರು ವಿವಿಧ ಸೌಲಭ್ಯಗಳನ್ನು ಪಡೆಯಲು ಭೌತಿಕವಾಗಿ ಅರ್ಜಿ ಸಲ್ಲಿಸುತ್ತಿದ್ದಾರೆ. ಸಕಾಲದಲ್ಲಿ ಅರ್ಜಿ ಸಲ್ಲಿಸುವ ಕುರಿತು ಬಹುತೇಕರಿಗೆ ಮಾಹಿತಿ ಇಲ್ಲ. ಆದ್ದರಿಂದ ಪ್ರತಿ ಇಲಾಖೆಗಳ ಅಧಿಕಾರಿಗಳು ನಿಮ್ಮ ಇಲಾಖೆಯ ಯಾವುದೇ ಕಾರ್ಯಕ್ರಮ, ಸಭೆಗಳನ್ನು ಆಯೋಜಿಸಿದಾಗ, ಗ್ರಾಮ ಪಂಚಾಯತಿವಾರು ತಳಮಟ್ಟದಿಂದ ಸಾರ್ವಜನಿಕರಿಗೆ ಸಕಾಲ ಕಾಯ್ದೆ, ಸಕಾಲದಲ್ಲಿ ಅರ್ಜಿ ಸಲ್ಲಿಕೆ ಪ್ರಕ್ರಿಯೆ, ಸಕಾಲದಲ್ಲಿ ಸಾರ್ವಜನಿಕರಿಗೆ ಒದಗಿಸಲಾದ ಹಕ್ಕುಗಳು, ಮುಂತಾದವುಗಳ ಬಗ್ಗೆ ಜಾಗೃತಿ ಮೂಡಿಸಿ. ಹೆಚ್ಚಿನ ಸಂಖ್ಯೆಯಲ್ಲಿ ಸಾರ್ವಜನಿಕರು ಸಕಾಲದಲ್ಲಿ ಅರ್ಜಿ ಸಲ್ಲಿಸುವಂತೆ ಕಾರ್ಯಕ್ರಮ ರೂಪಿಸಿ ಎಂದು ಅವರು ಹೇಳಿದರು.


ಸಕಾಲ ಅನುಷ್ಠಾನಾಧಿಕಾರಿಗಳು ಯಾವುದೇ ಕಾರಣಕ್ಕೂ ಅರ್ಜಿ ವಿಲೇ ಮಾಡಲು ನಿಗದಿಪಡಿಸಿದ ಅವಧಿಯನ್ನು ಮೀರಬಾರದು. ಅವಧಿ ಮೀರಿದರೆ ಅಥವಾ ತಪ್ಪು ಹಾಗೂ ವಿಳಂಬ ಮಾಹಿತಿ ನೀಡಿದರೆ ಸಂಬಂಧಿಸಿದವರಿಂದ ದಂಡ ವಸೂಲಾತಿ ಸೇರಿದಂತೆ ಸೂಕ್ತ ಕ್ರಮ ಕೈಗೊಳ್ಳಲಾಗುವುದು. ವಿಳಂಬ ಮಾಡಿದಷ್ಟು ಋಣಾತ್ಮಕ ಅಂಕಗಳು ಸೇರ್ಪಡೆಯಾಗುತ್ತವೆ. ಇದರಿಂದ ಅಧಿಕಾರಿ ಹಾಗೂ ವಿಷಯ ನಿರ್ವಾಹಕರ ಮೇಲೆ ವ್ಯತಿರಿಕ್ತ ಪರಿಣಾಮ ಉಂಟಾಗಬಹುದು. ಆದ್ದರಿಂದ ಎಚ್ಚರಿಕೆ ಹಾಗೂ ಜವಾಬ್ದಾರಿಯಿಂದ ಕಾರ್ಯನಿರ್ವಹಿಸಿ, ನಿಗದಿತ ಅವಧಿಯಲ್ಲಿ ಸಕಾಲ ಅರ್ಜಿ ವಿಲೇ ಮಾಡಲು ಕ್ರಮ ಕೈಗೊಳ್ಳಿ ಎಂದು ಅಪರ ಜಿಲ್ಲಾಧಿಕಾರಿಗಳು ಅಧಿಕಾರಿಗಳಿಗೆ ತಿಳಿಸಿದರು.

ಸಕಾಲ ಮೇಲ್ವಿಚಾರಕರಾದ ಕಾಮಾಕ್ಷಿ ಹಾಗೂ ಸಕಾಲ ಕನ್ಸಲ್ಟಂಟ್ ವಿಶ್ವನಾಥ ಅವರು ಸಕಾಲ ಕಾಯ್ದೆ, ಸಕ್ಷಮ ಹಾಗೂ ಅಪೀಲು ಅಧಿಕಾರಿ, ನಾಗರಿಕರ ಸೇವಾ ಖಾತರಿ ಅಧಿನಿಯಮ, ಪರಿಹಾರಾತ್ಮಕ ವೆಚ್ಚ ಮುಂತಾದವುಗಳ ಬಗ್ಗೆ ತರಬೇತಿ ಮೂಲಕ ಮಾಹಿತಿ ನೀಡಿದರು.

ಕಾರ್ಯಕ್ರಮದಲ್ಲಿ ವಿವಿಧ ತಾಲ್ಲೂಕುಗಳ ಗ್ರೇಡ್–2 ತಹಶೀಲ್ದಾರು, ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದ ಅಧಿಕಾರಿಗಳು, ತಾಂತ್ರಿಕ ಅಧಿಕಾರಿಗಳು ಮುಂತಾದವರು ಉಪಸ್ಥಿತರಿದ್ದರು.

**ಕವಿ ಮನಸು**

## ರಾಮ ಭಕ್ತೆ ಶಬರಿ



ನಿನ್ನ ನಾಮ ಸ್ಮರಣೆಯಲ್ಲಿ
ಕಾಲವೆಷ್ಟೋ ಕಳೆಯಿತು
ನಿನ್ನ ನೊಮ್ಮೆ ಕಾಣುವಾಸೆ
ಇಂದು ಈಗ ಫಲಿಸಿತು

ಬಾಳಿನಂತ್ಯಗೊಳುವ ಮೊದಲು
ದೊರಕಿ ನಿನ್ನ ದರ್ಶನ
ದೀನಳಾದ ಎನ್ನ ಬದುಕು
ಆಯಿತೀಗ ಪಾವನ

ನೀನು ಬರುವೆ ಹರಸಲಿರುವೆ
ಮನದಲಿತ್ತು ಭರವಸೆ
ಬಾಗಿಲಲ್ಲಿ ಬಂದು ನಿಂತೆ
ನನ್ನ ಬಯಕೆ ತೀರಿಸೆ

ವನದ ಹೂವು ಕೊಯ್ದು ತಂದೆ
ರಾಮ ನಿನ್ನ ಪೂಜಿಸೆ
ಕಚ್ಚಿ ನೋಡಿ ಸಿಹಿಯ ಹಣ್ಣು
ಇಟ್ಟೆ ನಿನಗೆ ಅರ್ಪಿಸೆ ॥

– ಪೆರ್ಮುಖ ಸುಬ್ರಹ್ಮಣ್ಯ ಭಟ್


## ನಿಲ್ಲದಿರಲಿ ನಿನ್ನ ಪ್ರಯತ್ನ..

ಒಬ್ಬ ಕಲಾವಿದನು
ತೆರೆ ಮೇಲೆ ಮೆರೆಯುವುದು,
ತೆರೆ ಮರೆಗೆ ಸರಿಯುವುದು.
ಅವನ ಶ್ರಮ ಮತ್ತು ಆಸಕ್ತಿಯಲ್ಲಿ ಅಡಗಿದೆ.
ಯಾರೇ ತಡೆದರು, ಯಾರೇ ಜರಿದರು
ಪ್ರೇಕ್ಷಕ ಪ್ರಭು ಮೆಚ್ಚಿ ಕೊಡುವ ಚಪ್ಪಾಳೆಯ
ಸದ್ದು ಕಿವಿಗೆ ಅಪ್ಪಳಿಸುವವರೆಗೂ
ನಿಲ್ಲದಿರಲಿ ನಿನ್ನ ಪ್ರಯತ್ನ..

– ಮಂಜುಶ್ರೀ ಮುರಳೀಧರ್
ತೋರಣಗಲ್ಲು, ಬಳ್ಳಾರಿ.

ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ
ಸ್ಥಳೀಯ ಸುದ್ದಿಗಳಿಗಾಗಿ ಭೇಟಿ ನೀಡಿ
www.hampitimes.com
epaper.hampitimes.com

## ತುಂಗಭದ್ರಾ ನೀರಿನ ಮಟ್ಟ




| ಶುಕ್ರವಾರ : 19-01-2024 | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1588.90 ಅಡಿ |
| ಒಳ ಹರಿವು | 00 ಕ್ಯುಸೆಕ್ |
| ಹೊರ ಹರಿವು | 00 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 10.135 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |
| ಕಳೆದ ವರ್ಷ ಇದೇ ದಿನ | |
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1619.89 ಅಡಿ |
| ಒಳ ಹರಿವು | 00 ಕ್ಯುಸೆಕ್ |
| ಹೊರ ಹರಿವು | 9483 ಕ್ಯುಸೆಕ್ |
| ಸಾಮರ್ಥ್ಯ | 61.015 ಟಿಎಂಸಿ |

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
– ಜಾಹೀರಾತು ವ್ಯವಸ್ಥಾಪಕರು.

**ಮೈಕ್ರೋ ನ್ಯೂಸ್**

## ತಾಂಡಾದ ಪಾಂಡುರಂಗ ದೇವಸ್ಥಾನ ಜೀರ್ಣೋದ್ಧಾರಕ್ಕೆ ಧರ್ಮಸ್ಥಳ ಸಂಘದಿಂದ 1 ಲಕ್ಷ ರೂ ಡಿಡಿ ಹಸ್ತಾಂತರ



**ಹಂಪಿ ಟೈಮ್ಸ್ ಹೊಸಪೇಟೆ**
ತಾಲೂಕಿನ ಮರಿಯಮ್ಮನಹಳ್ಳಿ ತಾಂಡಾದ ಶ್ರೀ ಪಾಂಡುರಂಗ ದೇವಸ್ಥಾನಕ್ಕೆ ಡಾ. ಡಿ ವೀರೇಂದ್ರ ಹೆಗ್ಗಡೆಯವರು ಮಂಜೂರಾತಿ ಮಾಡಿದ ರೂ..1 ಲಕ್ಷದ ಡಿಡಿ ಯನ್ನು ದೇವಸ್ಥಾನ ಆಡಳಿತ ಮಂಡಳಿ ಪದಾಧಿಕಾರಿಗಳಿಗೆ ವಿಜಯ ನಗರ ಜಿಲ್ಲಾ ನಿರ್ದೇಶಕರಾದ ಸತೀಶ್ ಶೆಟ್ಟಿ ರವರು ಹಸ್ತಾಂತರ ಮಾಡಿದರು.

ಧರ್ಮಸ್ಥಳ ಯೋಜನೆಯು ಸಕಾರಾತ್ಮಕವಾಗಿ ಸಮಾಜದ ಎಲ್ಲಾ ಕಾರ್ಯಕ್ರಮಗಳಿಗೆ ಪಾಲ್ಗೊಳ್ಳುತ್ತಿದ್ದೂ ಧಾರ್ಮಿಕ ಕಾರ್ಯಕ್ರಮಗಳಾದ ದೇವಸ್ಥಾನ ಜೀರ್ಣೋದ್ಧಾರಗಳು, ಸಾಮಾಜಿಕ ಕಾರ್ಯಕ್ರಮಗಳಾದ ಶಾಲಾ ಕಟ್ಟಡ, ಸಮುದಾಯ ಭವನ ಕಟ್ಟಡ, ಆರ್ಥಿಕ ಅಭಿವೃದ್ಧಿ ನಿಟ್ಟಿನಲ್ಲಿ ಸರಕಾರದ ವಿವಿಧ ಇಲಾಖೆಗಳು ಕೈಗೊಳ್ಳುವ ಕಾರ್ಯಕ್ರಮ, ಕೆರೆ ಅಭಿವೃದ್ಧಿ, ಮಾಸಾಸನ, ವಿಕಲ ಚೇತನರಿಗೆ ಪರಿಕರ ವಿತರಣೆ ಇತ್ಯಾದಿ ಕಾರ್ಯಕ್ರಮಗಳನ್ನು ಸಮುದಾಯಕ್ಕೆ ಪೂಜ್ಯರು ನೀಡಿತ್ತಿರುವುದು ಸಂತೋಷದ ವಿಚಾರ. ಯೋಜನೆ ಹಲವಾರು ಕಾರ್ಯಕ್ರಮಗಳ ಪ್ರಯೋಜನ ಪಡೆದುಕೊಳ್ಳುವಂತೆ ತಿಳಿಸಿದರು ಈ ಸಂದರ್ಭದಲ್ಲಿ ಆಡಳಿತ ಮಂಡಳಿ ಪದಾಧಿಕಾರಿಗಳಾದ, ರೇಖಾ ನಾಯ್ಕ, ಏಕಾಂಬ್ರೇಶ್ ನಾಯ್ಕ, ಲಕ್ಷ್ಮಣ ನಾಯ್ಕ, ಶಂಕರ ನಾಯ್ಕ, ವೆಂಕಟೇಶ ನಾಯ್ಕ, ಪೂಜಾರಿ ವೆಂಕಟೇಶ ನಾಯ್ಕ ಹಾಗೂ ತಾಲೂಕಿನ ಯೋಜನಾಧಿಕಾರಿ ಮಾರುತಿ ಎಸ್, ಮೇಲ್ವಿಚಾರಕರಾದ ನಂದನ ಕುಮಾರ್, ಸೇವಾಪ್ರತಿನಿಧಿ ಗೌರಿ ಸೇವಾದಾರರಾದ ಶರಣಪ್ಪ ಹಾಗೂ ಸಂಘದ ಸದಸ್ಯರು ಉಪಸ್ಥಿತರಿದ್ದರು.

## ಪುನಶ್ಚೇತನ ತರಬೇತಿ ಜ.21 ರಂದು

**ಹಂಪಿ ಟೈಮ್ಸ್ ಬಳ್ಳಾರಿ**
ಕರ್ನಾಟಕ ಮಧ್ಯಸ್ಥಿಕೆ ಕೇಂದ್ರ, ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ, ಬೆಂಗಳೂರು ಮಧ್ಯಸ್ಥಿಕೆ ಕೇಂದ್ರ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಬಳ್ಳಾರಿ ಇವರ ಸಂಯುಕ್ತಾಶ್ರಯದಲ್ಲಿ ಬಳ್ಳಾರಿ, ಕೊಪ್ಪಳ ಮತ್ತು ರಾಯಚೂರು ಜಿಲ್ಲೆಯ ನ್ಯಾಯಾಧೀಶರಿಗೆ 'ಒಂದು ದಿನದ ಪುನಶ್ಚೇತನ ತರಬೇತಿ' ಶಿಬಿರವನ್ನು ಜ.21 ರಂದು ಬೆಳಿಗ್ಗೆ 09.30 ಕ್ಕೆ ನಗರದ ತಾಳೂರು ರಸ್ತೆಯ ಹೊಸ ನ್ಯಾಯಾಲಯದ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿದೆ.

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಅಧ್ಯಕ್ಷರಾದ ಎಸ್.ಹೆಚ್.ಪುಷ್ಪಾಂಜಲಿ ದೇವಿ ಅವರು ಶಿಬಿರ ಉದ್ಘಾಟನೆ ಮಾಡುವರು.

ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಅಧ್ಯಕ್ಷರಾದ ಸಿ.ಚಂದ್ರಶೇಖರ್, ಬೆಂಗಳೂರು ಮಧ್ಯಸ್ಥಿಕೆ ಕೇಂದ್ರದ ತರಬೇತಿದಾರರಾದ ಸುಧಾ. ಎಸ್.ಎನ್., ವೈಶಾಲಿ ಹೆಗಡೆ ಸೇರಿದಂತೆ ಇತರರು ಉಪಸ್ಥಿತರಿರುವರು.

ವಕೀಲರಾದ ತ್ರಿವೇಣಿ ಪತ್ತಾರ್ ಅವರು ನಿರೂಪಣೆ ಮಾಡುವರು ಎಂದು ತಿಳಿಸಿದೆ.

## ಸ್ವಯಂ ಪ್ರೇರಿತವಾಗಿ ಸ್ವಚ್ಛತೆಗೆ ಕೈಜೋಡಿಸಿ

**ಹಂಪಿ ಟೈಮ್ಸ್ ಮರಿಯಮ್ಮನಹಳ್ಳಿ**
ಗ್ರಾಮಗಳನ್ನು ಕಸಮುಕ್ತ,ತ್ಯಾಜ್ಯಮುಕ್ತ ಎಂದು ಮಾಡಲು ಸಾರ್ವಜನಿಕರ ಸಹಭಾಗಿತ್ವ ಅಗತ್ಯ ಎಂದು ಡಣಾಪುರ ಗ್ರಾ.ಪಂ.ಅಧ್ಯಕ್ಷ ಹೆಚ್. ಮಲ್ಲೇಶ್ ಹೇಳಿದರು, ಅವರು ಸಮೀಪದ ಡಣಾಪುರದಲ್ಲಿ ಗ್ರಾಮಪಂಚಾಯತಿ ವ್ಯಾಪ್ತಿಯ ಗ್ರಾಮಗಳಲ್ಲಿ ಹಮ್ಮಿಕೊಂಡ ಸ್ವಚ್ಚತಾ ಆಂದೋಲನಕ್ಕೆ ಚಾಲನೆನೀಡಿ ಮಾತನಾಡಿದರು. ಎಲ್ಲೆಡೆ ಸ್ವಚ್ಛತೆ ಸಾಧಿಸಿ, ಸ್ವಚ್ಛ,ಸುಂದರ,ಸದೃಢ ಗ್ರಾಮಗಳನ್ನು ರೂಪಿಸುವ ಮಹತ್ವಾಕಾಂಕ್ಷೆಯನ್ನು ಹೊಂದಲಾಗಿದೆ. ಈ ವರ್ಷವು ಗ್ರಾಮಗಳ ಸ್ವಚ್ಛತೆಗೆ ಸ್ವಯಂ ಪ್ರೇರಿತವಾಗಿ ಶ್ರಮದಾನ ಚಟುವಟಿಕೆಗಳಲ್ಲಿ ಅಧಿಕಾರಿ ವರ್ಗ ಹಾಗೂ ಸಾರ್ವಜನಿಕರು ಭಾಗವಹಿಸಬೇಕು ಎಂದು ಕರೆನೀಡಿದರು.ನಂತರ ಹನುಮನಹಳ್ಳಿ, ಗಾಳೆಮ್ಮನಗುಡಿ ಗ್ರಾಮಗಳಲ್ಲಿ ಆಂದೋಲನಕ್ಕೆ ಚಾಲನೆ ನೀಡಿ ಗ್ರಾಮಸ್ಥರಿಗೆ ಸ್ವಚ್ಚತೆಯ ಕುರಿತು ಜಾಗೃತಿ ಮೂಡಿಸಲಾಯಿತು.

ಈ ಸಂಧರ್ಭದಲ್ಲಿ ಗ್ರಾ.ಪಂ.ಉಪಾಧ್ಯಕ್ಷೆ ಪದ್ಮಾವತಿ ವೆಂಕಟೇಶ್,ಪಿ.ಡಿ.ಒ.ನೀರಳ್ಳಿ ಮಂಜುನಾಥ, ಕಾರ್ಯದರ್ಶಿ ಕನಕಪ್ಪ ಸೇರಿದಂತೆ ಇತರರಿದ್ದರು.

# ದೇಗುಲಗಳ ಅಭಿವೃದ್ಧಿಗೆ 2 ಕೋಟಿ ರೂ

### ಶಾಸಕ ನೇಮಿರಾಜ್‌ನಾಯ್ಕ್ ಹೇಳಿಕೆ। 40 ದೇಗುಲು, ತಲಾ 5ಲಕ್ಷ ರೂ.ಗಳ ಅನುದಾನ ವಿತರಿಸಲಾಗಿದೆ

**ಹಂಪಿ ಟೈಮ್ಸ್ ಹಗರಿಬೊಮ್ಮನಹಳ್ಳಿ**
ಶಾಸಕರ ಅನುದಾನದಲ್ಲಿ ಬಂದ ಒಂದು ಕೋಟಿ ರೂ.ಗಳನ್ನು ಕ್ಷೇತ್ರ ವ್ಯಾಪ್ತಿಯ ಅಗತ್ಯವಿರುವ ದೇಗುಲಗಳ ಅಭಿವೃದ್ಧಿಗೆ ತಲಾ 5ಲಕ್ಷ ರೂ.ಗಳ ಅನುದಾನ ವಿತರಿಸಲಾಗಿದೆ ಎಂದು ಶಾಸಕ ಕೆ.ನೇಮಿರಾಜ್‌ನಾಯ್ಕ್ ಹೇಳಿದರು.

ತಾಲೂಕಿನ ನೆಲ್ಕುದ್ರಿ ಗ್ರಾಮದಲ್ಲಿ ಹಮ್ಮಿಕೊಳ್ಳಲಾಗದ್ದ ಗ್ರಾ.ಪಂ.ಯ ನೂತನ ಕಟ್ಟಡ ಉದ್ಘಾಟನೆ ಹಾಗೂ ಕನ್ನಿಹಳ್ಳಿ ಹಮ್ಮಿಕೊಳ್ಳಲಾಗಿದ್ದ ಬಾಲ್ ಬ್ಯಾಡ್ಮಿಂಟನ್ ಕ್ರೀಡಾಂಗಣ ಹಾಗೂ ಅಡುಗೆ ಕೊಠಡಿಗಳನ್ನು ಉದ್ಘಾಟಿಸಿ ಅವರು ಮಾತನಾಡಿದರು. ಬರುವ ಲೋಕಸಭೆ ಚುನಾವಣೆ ಬಳಿಕ ಕೆ.ಕೆ.ಆರ್.ಡಿ.ಬಿ. ಮತ್ತು ಕೆ.ಎಂ.ಆರ್.ಸಿ. ಹಾಗೂ ಡಿ.ಎಂ.ಎಫ್. ಅನುದಾನದಿಂದ ನೆಲ್ಕುದ್ರಿ ಗ್ರಾ.ಪಂ.ವ್ಯಾಪ್ತಿಯ ಗ್ರಾಮಗಳಲ್ಲಿ ಅಗತ್ಯ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸುವ ಮೂಲಕ ಅಭಿವೃದ್ಧಿಗೆ ಮುಂದಾಗುತ್ತೇವೆ ಎಂದು ಭರವಸೆ ನೀಡಿದರು.



ಗ್ರಾ.ಪಂ.ಅಧ್ಯಕ್ಷ ಇಟ್ಟಿಗಿ ದೊಡ್ಡಬಸಪ್ಪ ಮಾತನಾಡಿ, ಗ್ರಾ.ಪಂ.ವ್ಯಾಪ್ತಿಯ ಎಲ್ಲಾ ಗ್ರಾಮಗಳ ಅಭಿವೃದ್ಧಿಗೆ ಶ್ರಮಿಸೋಣ ಎಂದರು.

ಗ್ರಾ.ಪಂ.ಸದಸ್ಯ ಸಿ.ಕುಮಾರ್ ಮಾತನಾಡಿ, ಈ ಗ್ರ.ಪಂ. ವ್ಯಾಪ್ತಿಯಲ್ಲಿ ಎಲ್ಲಾ ಗ್ರಾಮಗಳಿಗೆ ಸಂಪರ್ಕ ಕಲ್ಪಿಸುವ ಒಂದು ಮಾರ್ಗವೆಂದರೆ, ಅದು ಚಿಮ್ನಳ್ಳಿ ಶ್ರೀದುರ್ಗಾಂಭಿಕಾ ದೇಗುಲದ ಮುಂದಿರುವ ಹಗರಿ ಹಳ್ಳಕ್ಕೆ ನೆಲ್ಕುದ್ರಿಯವರೆಗೂ ಸೇತುವೆ ನಿರ್ಮಾಣ ಮಾಡಲು ಯೋಜನೆ ಕೈಗೊಳ್ಳುವಂತೆ ಒತ್ತಾಯಿಸುವ ಜೊತೆಗೆ, ಗ್ರಾ.ಪಂ.ವ್ಯಾಪ್ತಿಯ ಒಳ ಗ್ರಾಮಗಳು ಸಂಪೂರ್ಣ ಹಿಂದುಳಿದಿದ್ದು, ಅವುಗಳ ಅಭಿವೃದ್ಧಿಗೆ ಮುಂದಾಗಬೇಕು ಎಂದು ಶಾಸಕರಲ್ಲಿ ಮನವಿ ಮಾಡಿದರು.

ಈ ವೇಳೆ ಜೆಡಿಎಸ್ ಜಿಲ್ಲಾ ಉಪಾಧ್ಯಕ್ಷ ಕೃಷ್ಣಮೂರ್ತಿ, ಕ್ಷೇತ್ರಾಧ್ಯಕ್ಷ ವೈ.ಮಲ್ಲಿಕಾರ್ಜುನ, ಗ್ರಾ.ಪಂ.ಉಪಾಧ್ಯಕ್ಷೆ ಕಂಚಿಕೆರೆ ಶೋಭಾ, ಸದಸ್ಯರಾದ ಬಿ.ಜಿ.ಅನ್ನಪೂರ್ಣಮ್ಮ, ತಳಕಲ್ ಶೇಖರಪ್ಪ, ಎಂಭೀಮ್ಮ ಗಣೇಶ, ಎಚ್. ದೇವೇಂದ್ರಪ್ಪ, ವಾಲೇಕರ್ ಶಿವಕ್ಕ ಶಿವರಾಜ್, ಡಿ.ಬಸಮ್ಮ ಹನುಮಂತಪ್ಪ, ಬೆಟ್ಟನಗೌಡ್ರು ಮಲ್ಲಿಕಾರ್ಜುನ, ಕೊಟ್ನಾಳ್ ಸುರೇಶ, ಹುಲಿಗೆಮ್ಮ ಹುಚ್ಚಪ್ಪ, ಮುಖಂಡರಾದ ಪಾಂಡುರಂಗನಾಯ್ಕ್, ಆಡೂರು ಶಿವಕುಮಾರ್, ಚಿತ್ತವಾಡ್ಗಿ ಪ್ರಕಾಶ್, ಕನ್ನಿಹಳ್ಳಿ ಚಂದ್ರಶೇಖರ್, ಶಿವಾನಂದಪ್ಪ, ಜಗದೀಶ, ತಾ.ಪಂ.ಇಒ ಪರಮೇಶ್ವರಪ್ಪ, ನರೇಗಾ ಸಹಾಯಕ ಅಧಿಕಾರಿ ರಮೇಶ್ ಮಹಾಲಿಂಗಪುರ, ಪಿಡಿಒ ಅಂಗಡಿ ಸುಜಾತ, ಕಾರ್ಯದರ್ಶಿ ಕಾಳಪ್ಪ ಇತರರಿದ್ದರು.

# ಸಂವಿಧಾನ ಜಾಗೃತಿ ಜಾಥಾ ಯಶಸ್ವಿಗೊಳಿಸಿ

### ತಾಲ್ಲೂಕು ಮಟ್ಟದ ಜಾಗೃತಿ ಸಮಿತಿ ಅಧ್ಯಕ್ಷ ವಿಶ್ವಜೀತ್ ಮೇಹತ್ ಹೇಳಿಕೆ। ಪೂರ್ವಭಾವಿ ಸಭೆ

**ಹಂಪಿ ಟೈಮ್ಸ್ ಹೊಸಪೇಟೆ**
ಹೊಸಪೇಟೆ ತಾಲ್ಲೂಕಿನಲ್ಲಿ ಸಂವಿಧಾನ ಜಾಗೃತಿ ಜಾಥಾ ಕಾರ್ಯಕ್ರಮವನ್ನು ಯಶಸ್ವಿಗೊಳಿಸುವಂತೆ ಹೊಸಪೇಟೆ ತಹಶೀಲ್ದಾರರು ಹಾಗೂ ಸಂವಿಧಾನ ಜಾಗೃತಿ ಜಾಥಾ ಕಾರ್ಯಕ್ರಮದ ತಾಲ್ಲೂಕು ಮಟ್ಟದ ಜಾಗೃತಿ ಸಮಿತಿ ಅಧ್ಯಕ್ಷರಾದ ವಿಶ್ವಜೀತ್ ಮೇಹತ್ ಹೇಳಿದರು.



ಸಂವಿಧಾನ ಜಾಗೃತಿ ಜಾಥಾ ಕಾರ್ಯಕ್ರಮದ ಕುರಿತು ಜನವರಿ 18ರಂದು ಹೊಸಪೇಟೆ ತಹಶೀಲ್ದಾರರ ಕಾರ್ಯಾಲಯದ ಸಭಾಂಗಣದಲ್ಲಿ ನಡೆದ ಪೂರ್ವಭಾವಿ ಸಭೆ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಸಂವಿಧಾನ ರಚನೆಗೊಂಡು 75 ವರ್ಷಗಳ ಚಾಲ್ತಿಯಲ್ಲಿ ರುವುದರಿಂದ ಸಂವಿಧಾನ ಜಾಗೃತಿ ಜಾಥಾ ಕಾರ್ಯಕ್ರಮವನ್ನು ರಾಷ್ಟ್ರೀಯ ಮಟ್ಟದ ಸಮಾವೇಶವನ್ನು ನಡೆಸಲು ಸರ್ಕಾರವು ನಿರ್ಧರಿಸಿದೆ. ವಿಜಯನಗರ ಜಿಲ್ಲೆಯ ಎಲ್ಲಾ ತಾಲ್ಲೂಕಿನ ವ್ಯಾಪ್ತಿಯಲ್ಲಿ ಬರುವ ಗ್ರಾಮ ಪಂಚಾಯತಿಗಳ ಮುಖಾಂತರ ಸ್ಥಬ್ದ ಚಿತ್ರದೊಂದಿಗೆ ಮೇರವಣಿಗೆ ಹಾಗೂ ಇನ್ನಿತರೆ ಕಾರ್ಯಕ್ರಮವನ್ನು ಯಶ್ವಸಿಯಾಗಿ ನಡೆಸಲು ಜಿಲ್ಲಾಧಿಕಾರಿಗಳು ಜಿಲ್ಲಾ ಮಟ್ಟದ ಹಾಗೂ ತಾಲ್ಲೂಕು ಮಟ್ಟದ ಸಮಿತಿಯನ್ನು ರಚಿಸಿದ್ದಾರೆ. ಈ ಹಿನ್ನೆಲೆಯಲ್ಲಿ ಸಮಿತಿ ಅಧಿಕಾರಿಗಳು ಜಬಾವ್ದಾರಿಯುತವಾಗಿ ಕಾರ್ಯನಿರ್ವಹಿ ಸಬೇಕು ಎಂದು ಹೇಳಿದರು.

ಭಾತರದ ಸಂವಿಧಾನದ ಆಚರಣೆ ಮತ್ತು ಅದರ ಮಹತ್ವದ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸುವ ನಿಟ್ಟಿನಲ್ಲಿ ಸಂವಿಧಾನ ಜಾಗೃತಿ ಜಾಥಾ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದ್ದು, ಜನವರಿ 26ರ ಗಣಾರಾಜ್ಯೋತ್ಸವ ಸಮಾರಂಭ ದಲ್ಲಿ ಸ್ಥಬ್ದಚಿತ್ರಕ್ಕೆ ಜಿಲ್ಲಾ ಉಸ್ತುವಾರಿ ಸಚಿವರಿಂದ ಚಾಲನೆ ನೀಡುವರು. ಮೂರು ದಿನಗಳ ಹೊಸಪೇಟೆ ತಾಲ್ಲೂಕಿನಲ್ಲಿ ಒಟ್ಟು 14 ಗ್ರಾಮ ಪಂಚಾಯತಿಗಳ ಮುಖಾಂತರ ಸ್ಥಬ್ದಚಿತ್ರದ ಮೇರೆವಣಿಗೆ ನಡೆಯಲಿದ್ದು, ಈ ಜಾಥಾ ಕಾರ್ಯಕ್ರಮವನ್ನು ಯಶ್ವಸಿಗೆ ಎಲ್ಲರೂ ಸಹಕರಿಸಬೇಕು ಎಂದು ತಿಳಿಸಿದರು.

ಸಭೆಯಲ್ಲಿ ತಾ.ಪಂ ಕಾರ್ಯನಿರ್ವಾಹಕ ಅಧಿಕಾರಿಗಳು, ಪೊಲೀಸ್ ಉಪ ಅಧೀಕ್ಷಕರು, ತಾಲ್ಲೂಕು ಶಿಕ್ಷಣಾಧಿ ಕಾರಿಗಳು, ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು, ತಾಲ್ಲೂಕು ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗಳು, ತಾಲ್ಲೂಕು ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿಗಳು, ತಾಲ್ಲೂಕು ವಿಸ್ತಿರ್ಣಾಧಿಕಾರಿಗಳು ಅಲ್ಪ ಸಂಖ್ಯಾತರ ಇಲಾಖೆ, ಹಾಗೂ ಸದಸ್ಯ ಕಾರ್ಯದರ್ಶಿಗಳು, ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕರು ಸೇರಿದಂತೆ ಮತ್ತಿತರರಿದ್ದರು.

# ಸರ್ವ ಸದಸ್ಯರ ಮಹಾಸಭೆ, ಪುರಸ್ಕಾರ



**ಹಂಪಿ ಟೈಮ್ಸ್ ಹೊಸಪೇಟೆ**
ನಗರದ ಸುವರ್ಣ ಭವನದಲ್ಲಿ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ ಜಿಲ್ಲಾ ಶಾಖೆ ವಿಜಯನಗರ ವತಿಯಿಂದ ಸರ್ಕಾರಿ ನೌಕರರ ಮಕ್ಕಳ ಪ್ರತಿಭಾ ಪುರಸ್ಕಾರ ಕಾರ್ಯಕ್ರಮ ಹಾಗೂ ವಾರ್ಷಿಕ ಸರ್ವ ಸದಸ್ಯರ ಮಹಾ ಸಭೆ ಶುಕ್ರವಾರ ಜರುಗಿತು.

ಸಂಘದ ರಾಜ್ಯಾಧ್ಯಕ್ಷ ಸಿ.ಎಸ್ ಷಡಾಕ್ಷರಿ ಮಾತನಾಡಿ, 103 ವರ್ಷಗಳ ಸಂಘದ ಇತಿಹಾಸವನ್ನು ಸಭೆಗೆ ತಿಳಿಸಿ ಸಂಘದ ಮುಂದಿರುವ ಪ್ರಮುಖ ಬೇಡಿಕೆಗಳಾದ 7ನೇ ವೇತನದ ಆಯೋಗದ ಅಂತಿಮ ವರದಿ ಪಡೆದು ಅನುಷ್ಠಾನ, NPS ರದ್ದು ಮಾಡಿ OPS ಜಾರಿಗೆ ಕ್ರಮ ವಹಿಸುವುದು, ಶೀಘ್ರವಾಗಿ ಆರೋಗ್ಯ ಸಂಜೀವಿನಿ ಯೋಜನೆಯ ಲೋಕಾರ್ಪಣೆ ಮುಂತಾದ ಬೇಡಿಕೆಗಳ ಬಗ್ಗೆ ಮುಖ್ಯಮಂತ್ರಿಗಳಾದ ಸಿದ್ದರಾಮಯ್ಯ ನವರು ಮತ್ತು ಉಪ ಮುಖ್ಯಮಂತ್ರಿಗಳಾದ ಡಿ.ಕೆ ಶಿವಕುಮಾರ್ ಇವರ ಬಳಿ ಸಂಘದ ನಿಯೋಗದೊಂದಿಗೆ ತೆರಳಿ ಈಗಾಗಲೇ ಚರ್ಚೆ ಮಾಡಿ ಮನವಿ ಮಾಡಲಾಗಿದೆ. ಸರ್ಕಾರದಿಂದ ಸಕಾರಾತ್ಮಕ ಸ್ಪಂದನೆ ಸಿಕ್ಕಿದೆ. ಇಷ್ಟರಲ್ಲೇ ರಾಜ್ಯ ಸರ್ಕಾರಿ ನೌಕರರು, ಕುಟುಂಭಸ್ಥರು, ನಿವೃತ್ತ ನೌಕರರು, ಮತ್ತು ಸರ್ಕಾರಿ ಸ್ವಾಮ್ಯದ ಪ್ರಾಧಿಕಾರ, ವಿಶ್ವ ವಿದ್ಯಾನಿಲಯ ನೌಕರರ ಬೃಹತ್ ಸಮ್ಮೇಳನವನ್ನು ಸಂಘದಿಂದ ಆಯೋಜಿಸಲು ತೀರ್ಮಾನಿಸಿದ್ದು ಈ ಸಮ್ಮೇಳನ ಸರ್ಕಾರಿ ನೌಕರರ ಬೇಕು ಬೇಡಿಕೆಗಳ ಹಕ್ಕೊತ್ತಾಯ ಸಮಾವೇಶ ಆಗಲಿದ್ದು ಲಕ್ಷಾಂತರ ನೌಕರರು ಸಾಗರೋಪಾದಿಯಲ್ಲಿ ಭಾಗವಹಿಸಿ ಯಶಸ್ವಿ ಮಾಡುವ ಜವಾಬ್ದಾರಿ ಎಲ್ಲಾ ನೌಕರರ ಮೇಲಿದೆ ಎಂದು ತಿಳಿಸಿದರು.

ಅಪರ ಜಿಲ್ಲಾಧಿಕಾರಿ ಅನುರಾಧ ಮಾತನಾಡಿ, ಮಕ್ಕಳು ತಾವು ಇಷ್ಟಪಡುವ ಕೋರ್ಸ್‌ಗಳನ್ನು ಆಯ್ಕೆ ಮಾಡಿಕೊಂಡು ಓದಲು ಪಾಲಕರು ಅವಕಾಶ ಮಾಡಿಕೊಡಬೇಕು ಅಂದಾಗ ಮಾತ್ರ ಮಕ್ಕಳ ಭವಿಷ್ಯ ಉಜ್ವಲ ವಾಗುತ್ತದೆ ಎಂದು ತಿಳಿಸಿದರು.

ಡಾ। ಕೇದಾರೇಶ್ವರ ಡಂಡಿನ್ ಮತ್ತು ಡಾ। ಮುನಿವಾಸುದೇವ ರೆಡ್ಡಿ ಉಪನ್ಯಾಸ ನೀಡಿದರು, ವೇದಿಕೆಯಲ್ಲಿ ಕೇಂದ್ರ ಸಂಘದ ಕಾರ್ಯದರ್ಶಿ ಡಾ। ಸದಾನಂದಪ್ಪ ನೆಲ್ಕುದ್ರಿ, ರಾಜ್ಯ ಕಾರ್ಯಧ್ಯಕ್ಷ ಮಲ್ಲಿಕಾರ್ಜುನ ಬಿ ಬಳ್ಳಾರಿ, ಬಳ್ಳಾರಿ ಜಿಲ್ಲಾ ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಎಂ, ಶಿವಾಜೀ ರಾವ್, ಮಾತನಾಡಿ ಪ್ರತಿಭಾವಂತ ಮಕ್ಕಳಿಗೆ ಪ್ರೋತ್ಸಾಹಿಸಿದರು,

ರಾಜ್ಯ ಪ್ರಧಾನ ಕಾರ್ಯದರ್ಶಿ ಶ್ರೀನಿವಾಸ ತಿಮ್ಮೇಗೌಡ, ಹಿರಿಯ ಉಪಾಧ್ಯಕ್ಷರಾದ ರುದ್ರಪ್ಪ ಎಂ.ವಿ, ಎಸ್ ಬಸವರಾಜ, ರಾಜ್ಯ ಪರಿಷತ್ ಸದಸ್ಯರು, ಕೇಂದ್ರ ಸಂಘದ ಪದಾಧಿಕಾರಿಗಳು, ಜಿಲ್ಲಾ ಗೌರವಾಧ್ಯಕ್ಷ, ಹೆಚ್, ಜೀವಣ್ಣ, ಖಜಾಂಚಿ ರಾಘವೇಂದ್ರ ಹೆಗಡಿಯಾಳ, ರಾಜ್ಯ ಪರಿಷತ್ ಸದಸ್ಯರಾದ ಎಸ್, ಬಸವರಾಜ, ಜಿಲ್ಲಾ ಕಾರ್ಯದರ್ಶಿ ಕಡ್ಲಿ ವೀರಭದ್ರೇಶ, ಪದಾಧಿಕಾರಿಗಳು, ಕ್ಷೇತ್ರ ಶಿಕ್ಷಣಾಧಿಕಾರಿ ಎಂ, ಚನ್ನಬಸಪ್ಪ, ಜಿಲ್ಲಾ ಖಜಾನಾಧಿಕಾರಿ ಡಾ।ರಾಮಪ್ರಸಾದ್ ಟಿ, ಇತರರಿದ್ದರು. ಜಿಲ್ಲಾಧ್ಯಕ್ಷ ಜಿ, ಮಲ್ಲಿಕಾರ್ಜುನ ಗೌಡ ಅಧ್ಯಕ್ಷತೆವಹಿಸಿದ್ದರು, ನಗರಸಭಾ ಅಧ್ಯಕ್ಷೆ ಎ ಲತಾ ಉದ್ಘಾಟಿಸಿದರು,

ಶಿಕ್ಷಕರ ಸಂಘದ ಅಧ್ಯಕ್ಷ ಕೆ ಬಸವರಾಜ, ಜಿಲ್ಲಾ ಕಾರ್ಯದರ್ಶಿ ಕಡ್ಲಿ, ವೀರಭದ್ರೇಶ ನಿರ್ವಹಿಸಿದರು. ಮುಖ್ಯಮಂತ್ರಿ ಚಿನ್ನದ ಪದಕ ಪುರಸ್ಕೃತರಾದ ಹೊಂ ಗಾರ್ಡ್ ಸಿಬ್ಬಂದಿ ಪಿ, ಕೊಟ್ರಪ್ಪ, ಕೆ ಬೆಟ್ಟದೇಶ, ಮತ್ತು ನಾಟಕ ಸ್ಪರ್ಧೆಯಲ್ಲಿ ರಾಷ್ಟ್ರ ಮಟ್ಟಕ್ಕೆ ಆಯ್ಕೆಯಾದ ಕೊಟ್ಟೂರು ತಾಲೂಕು ಸರ್ಕಾರಿ ನೌಕರರಿಗೆ ಮತ್ತು ಪಿ.ಯು.ಸಿ ಮತ್ತು ಎಸ.ಎಸ್. ಎಲ್.ಸಿ ವಿಧ್ಯಾರ್ಥಿಗಳಿಗೆ ಪ್ರಶಸ್ತಿ ಪತ್ರ, ಪುರಸ್ಕಾರ ನೀಡಿ ಸನ್ಮಾನಿಸಲಾಯಿತು

# ಗಣರಾಜ್ಯೋತ್ಸವದ ಪೂರ್ವಭಾವಿ ಸಭೆ

### ಕೂಡ್ಲಿಗಿಯಲ್ಲಿ ತಹಸೀಲ್ದಾರ್ ಎಂ.ರೇಣುಕಾ ಅವರಿಂದ ಗಣರಾಜ್ಯೋತ್ಸವದ ಧ್ವಜಾರೋಹಣ



**ಹಂಪಿ ಟೈಮ್ಸ್ ಕೂಡ್ಲಿಗಿ**
ಪಟ್ಟಣದ ಪ್ರವಾಸಿ ಮಂದಿರದಲ್ಲಿ ಶುಕ್ರವಾರ ತಹಸೀಲ್ದಾರ್ ಎಂ.ರೇಣುಕಾ ಅಧ್ಯಕ್ಷತೆಯಲ್ಲಿ ಗಣರಾಜ್ಯೋತ್ಸವದ ಪೂರ್ವಭಾವಿ ಸಭೆ ಜರುಗಿತು.

ಗಣರಾಜ್ಯೋತ್ಸವ ದಿನದಂದು ಬೆಳಿಗ್ಗೆ 8:30 ಕ್ಕೆ ಶಾಸಕ ಡಾ.ಎನ್.ಟಿ.ಶ್ರೀನಿವಾಸ್ ಗಾಂಧಿ ಚಿತಾಭಸ್ಮವಿರುವ ಹುತಾತ್ಮರ ಸ್ಮಾರಕಕ್ಕೆ ಪುಷ್ಪನಮನ ಸಿಲ್ಲಿಸುವರು. ನಂತರ ತಹಸೀಲ್ದಾರ್ ಎಂ.ರೇಣುಕಾ ಧ್ವಜಾರೋಹಣ ನೆರವೇರಸಲಿದ್ದು. ಶಾಸಕ ಡಾ.ಎನ್.ಟಿ.ಶ್ರೀನಿವಾಸ್ ಪೋಲಿಸ್ ಇಲಾಖೆ ಹಾಗೂ ನಾನಾ ಶಾಲಾ ವಿಧ್ಯಾರ್ಥಿಗಳಿಂದ ಧ್ವಜಾವಂದನೆ ಸ್ವೀಕರಿಸುವರು.ನಂತರ ವೇದಿಕೆ ಕಾರ್ಯಕ್ರಮದಲ್ಲಿ ಗಣರಾಜ್ಯೋತ್ಸವ ಸಂದೇಶವನ್ನು ತಹಸೀಲ್ದಾರ್ ಎಂ. ರೇಣುಕಾ ನಡೆಸಿಕೊಡಲಿದ್ದು, ಶಾಸಕ ಡಾ.ಎನ್.ಟಿ.ಶ್ರೀನಿವಾಸ್ ಸಂವಿಧಾನ ಶಿಲ್ಪಿ ಅಂಬೇಡ್ಕರ್ ಹಾಗೂ ಮಹಾತ್ಮ ಗಾಂಧಿಜೀ ಸೇರಿದಂತೆ ಕ್ಷೇತ್ರದ ಪ್ರಗತಿಯ ಹಿನ್ನೋಟ ಹಾಗೂ ಮುನ್ನೋಟದ ಬಗ್ಗೆ ತಿಳಿಸುವರು.ನಂತರ ವಿವಿಧ ಶಾಲಾ ಮಕ್ಕಳಿಂದ ದೇಶಭಕ್ತಿ ಬಿಂಬಿಸುವ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗುವವು. ಇದೇ ಸಂಧರ್ಭದಲ್ಲಿ ಪಟ್ಟಣದ ಶಾಲಾ,ಕಾಲೇಜು ಮಕ್ಕಳಿಗೆ ರಾಷ್ಟ್ರೀಯ ಹಬ್ಬದ ಕುರಿತು ನಡೆಸುವ ಪ್ರಬಂಧ ಹಾಗೂ ಭಾಷಣ ಸ್ಪರ್ಧೆಗಳಲ್ಲಿ ಭಾಗವಹಿಸಿ ವಿಜೇತ ವಿಧ್ಯಾರ್ಥಿಗಳಿಗೆ ಶಾಸಕರು ಬಹುಮಾನ ವಿತರಣೆ ಮಾಡುವರು.ಅದರಂತೆ ಕ್ಷೇತ್ರದಲ್ಲಿ ಕೃಷಿಯಲ್ಲಿ ಹಾಗೂ ಇತರೆ ಸಮಾಜಿಕ ಸೇವೆಯಲ್ಲಿ ಗಣನೀಯ ಸೇವೆ ಸಲ್ಲಿಸಿದ ಮಹನೀಯರಿಗೆ ಸನ್ಮಾನ ಕಾರ್ಯಕ್ರಮ ನೆರವೇರಿಸುವರು.ಐಎಎಸ್,ಕೆಎಎಸ್ ಅರ್ಹತಾ ಪರೀಕ್ಷೆಯಲ್ಲಿ ಪಾಸಾದ ವಿಧ್ಯಾರ್ಥಿಗಳನ್ನು ಸಹ ಶಾಸಕ ಡಾ.ಎನ್.ಟಿ.ಶ್ರೀನಿವಾಸ್ ಸನ್ಮಾನಿಸಿ,ಗೌರವಿಸಲಿದ್ದಾರೆ ಎಂದು ತಹಸೀಲ್ದಾರ್ ಎಂ.ರೇಣುಕಾ ಸಭೆಯಲ್ಲಿ ತಿಳಿಸಿದರು. ಕಾರ್ಯಕ್ರಮದಲ್ಲಿ ಎಲ್ಲಿಯೂ ಲೋಪಗಳು ಆಗದಂತೆ ತಾಲೂಕು ಮಟ್ಟದ ಎಲ್ಲಾ ಇಲಾಖೆಗಳಿಗೂ ಜವಾಬ್ದಾರಿಗಳನ್ನು ನೀಡಿದ್ದು, ಎಲ್ಲರೂ ಸಹಕರಿಸಿ ಗಣರಾಜ್ಯೋತ್ಸವ ಕಾರ್ಯಕ್ರಮವನ್ನು ಯಶಸ್ವಿಗೊಳಿಸಲು ಕೋರಿದರು.ತಾಲೂಕಿನ ಎಲ್ಲಾ ಶಾಲೆ,ಕಾಲೇಜು ಹಾಗೂ ಸ್ಥಳೀಯ ಆಡಳಿತದಲ್ಲಿ ಗಾಂಧಿಜೀ ಹಾಗೂ ಅಂಬೇಡ್ಕರ್ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ, ಅವರ ಚಿಂತನೆಗಳ ಬಗ್ಗೆ ಸಮಾಜಕ್ಕೆ ತಿಳಿಸಬೇಕು ಎಂದು ಸಭೆಯಲ್ಲಿ ನಿರ್ಧಾರ ಮಾಡಲಾಯಿತು. ತಾಪಂ ಇಒ ವೈ.ರವಿಕುಮಾರ್,ಬಿಇಒ ಪದ್ಮನಾಭ ಕರಣಂ,ಸರ್ಕಾರಿ ನೌಕರರ ಸಂಘದ ತಾಲೂಕು ಅಧ್ಯಕ್ಷ ಪಿ.ಶಿವರಾಜ್, ಗಾಂಧಿ ಸ್ಮಾರಕ ಸಮಿತಿ ಅಧ್ಯಕ್ಷ ಡಿ.ನಾಗರಾಜ, ಮುಖಂಡರಾದ ಎ.ಎಂ.ವೀರಯ್ಯ,ಕರವೇ ಅಧ್ಯಕ್ಷ ಕಾಟೇರ್ ಹಾಲೇಶ್, ಬಂಡೆ ರಾಘವೇಂದ್ರ, ಷಾಮೀಯಾನ ಚಂದ್ರು,ನರೇಂದ್ರ ಸ್ವಾಮಿ, ತಿಪ್ಪೇಸ್ವಾಮಿ, ಗುನ್ನಳ್ಳಿ ಶ್ರೀಧರ,ರಾಘವೇಂದ್ರ ಸೇರಿದಂತೆ ತಾಲೂಕು ಮಟ್ಟದ ಅಧಿಕಾರಿಗಳು ಇದ್ದರು.



ಹೊಸಪೇಟೆ ತಾಲೂಕಿನ ಡಣಾಪುರ ಗ್ರಾಮಪಂಚಾಯತಿ ವ್ಯಾಪ್ತಿಯ ಗ್ರಾಮಗಳಲ್ಲಿ ಸ್ವಚ್ಛತಾ ಆಂದೋಲನ ನಡೆಯಿತು.




Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA